Reg. No. M. 1550

KODAGU

20—9—1935

IF NOT

delivered

please return to

"KODAGU"

OFFICE,

MERCARA.

ಕೊಡಗು

ಸ್ವೇನ ಭೂತದಯಯಾ ವಿದ್ಯಾ ಶೀತಿ ಪ್ರಯತ್ನಶಾಃ|| ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯಸಂಪದಾ

ಅಚ್ಚುಮೊಚ್ಚಿನ

ಮುದ್ರಣ ಕೆಲಸಕ್ಕೆ

"ಕೊಡಗು"

ಪ್ರೆಸ್ಸ್,

ಮಡಿಕೇರಿ.

—o—

ಹೆಚ್ಚಿನ ವಿಷಯಕ್ಕೆ

ಕೂಡಲೆ ವಿಚಾರಿಸಿರಿ.

ವಾರ್ಷಿಕ ಚಂದಾ ರೂ. ೩—೮—೦.

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವದು.

ಸಂಪುಟ ೧೫]   ಮಡಿಕೇರಿ, ಸನ್ ೧೯೩೫ನೇ ಇಸವಿ ಸಪ್ಟಂಬರ್ ತಾರೀಕು ೨೦ನೇ ಶುಕ್ರವಾರ.   [ಸಂಚಿಕೆ ೧೫

By Appointment
To H. E. The Governor of Madras.

CUPS AND MEDALS.



Telephone;
3145

Telegrams:
'PRECIOUS.'



V. SUBRAMANIA IYER.

Jeweller, & Diamond Merchant,

52–44   2 & 3 Kuppumuthu Street Tiruvateswaranpet. MADRAS. POST BOX 423 TRIPLICANE.

Catalogue & special designs with quotations (free) on enquiry.

THE CANARA BANKING CORPORATION UDIPI, LTD.,

Established 1906.]   [Incorporated in British India.

Head office;—UDIPI (S. Kanara.)

It will pay you if you call at our offices at MERCARA or VIRARAJENDRAPET

(1) Fixed Deposits are now accepted up to 5%.

(2) Current accounts opened free of any charge and interest allowed up to 2%.

(3) Savings Bank accounts—Interest allowed at

3½%

Special facilities offered—(1) Withdrawals allowed by cheques.

(2) Production of pass books unnecessary at each withdrawal

(3) Accounts transferred from one office to another free of any charges

(4) Cumulative Deposits—a speciality.

Advances granted on approved securities on easy terms.

All kinds of banking business transacted   For further particulars please apply to any of our offices.

Udipi.   M. Srinivasa Prabhu,
29–7–1935.   52–45   Manager.

ಶಬ್ದಗಳಿಲ್ಲಿ ನಿಷ್ಪ್ರಯೋಜಕವಾಗುವವೋ ಅಲ್ಲಿ ಕಾರ್ಯಸ್ಥಿತಿ ಮತ್ತು ಸಂಖ್ಯೆಗಳು ನಿಜಾಂಶವನ್ನು ವ್ಯಕ್ತಗೊಳಿಸುವವು.

"ಜನರಲ್ ಅಷ್ಯೂರೆನ್ಸ್" ಅಜ್ಮೀರ್.

ಈ ವಿಮಾ ಸಂಸ್ಥೆಯು ಕಠಿಣ ಶೋಧನೆಗಳನ್ನು ಈ ಫಲಿತಾಂಶಗಳಿಂದ ಧಿಕ್ಕರಿಸಿರುವದು.

ಜಾರಿಯಲ್ಲಿರುವ ವಿಮೆವೊಬಲಗು (ಹೆಚ್ಚು)	265 ಲಕ್ಷ
ಲೇವಾದೇವಿಯಲ್ಲಿರುವವೊಬಲಗು ಸುಮಾರು	70 ಲಕ್ಷ
ವಾರ್ಷಿಕ ಉತ್ಪತ್ತಿಗಳು (ಹೆಚ್ಚು)	ರೂ. 16 ಲಕ್ಷ
ವಿಮಾ ಹಕ್ಕುಗಳ ಪಾವತಿ	ರೂ. 33 ಲಕ್ಷ

ಬೋನಸ್ಸು ಬೇರೆ ಕಂಪನಿಗಳಿಗಿಂತ ಅಧಿಕ

ಜೀವಾವಧಿ ಪಾಲಿಸಿಗಳಿಗೆ ಸಾವಿರಕ್ಕೆ ರೂ. 25%o } { ಎಂಡೋಮೆಂಟ್ ಪಾಲಿಸಿಗಳಿಗೆ ಸಾವಿರಕ್ಕೆ ರೂ. 20%o

ಏಜೆನ್ಸಿಯ ನಿಯಮಗಳು ವಿಶೇಷ ಲಾಭದಾಯಕ.

ಇತರ ವಿವರಗಳಿಗೆ ಕೂಡಲೇ ಈ ಕೆಳಗಿನವರಿಗೆ ಬರೆಯಿರಿ:—

ಟಿ. ಡಿ. ಭಾರ್ಗವ, ಎಫ್. ಎಸ್. ಎಸ್. (ಲಂಡನ್),
ಜನರಲ್ ಮೇನೇಜರ್, ದಿ ಜನರಲ್ ಅಷ್ಯೂರೆನ್ಸ್ ಸೊಸೈಟಿ ಲಿಮಿಟೆಡ್, ಅಜ್ಮೀರ್.   ಅಥವಾ:—

ಎ. ಎಸ್. ಎಸ್. ಅಯ್ಯಂಗಾರ್,
ಸುಪರಿಂಟೆಂಡೆಂಟ್, ಜನರಲ್ ಅಷ್ಯೂರೆನ್ಸ್ ಬಿಲ್ಡಿಂಗ್,
ಚಾಮರಾಜಪೇಟೆ, 3ನೇ ರೋಡು.

52—16   ಬೆಂಗಳೂರು ಸಿಟಿ.

ವಿವಿಧ ವಾರ್ತಾವಳಿ.

ಗ್ರೀಸಿಗೆ ಪುನಃ ರಾಜಸತ್ತೆ.

ಪ್ರಥಮ ಪ್ರಜಾಪ್ರತಿನಿಧಿತ್ವವನ್ನು ಸ್ಥಾಪಿಸಿದ ಗ್ರೀಸ್ ದೇಶಕ್ಕೆ ಈಗ ರಾಜಸತ್ತೆಯು ಬೇಕಾಗಿದೆಯಂತೆ. ಇದನ್ನು ನಿರ್ಧರಿಸಲು 27ನೇ ಅಕ್ಟೋಬರಿನಲ್ಲಿ ಜನಮತವನ್ನೆಣಿಸುವಂತೆ ನಿರ್ಧರಿಸಿರುವರು.

—೦೦೦—

ಕಮಲಾ ನೆಹರೂರವರು ಗುಣಮುಖರಾಗುತ್ತಲಿದ್ದಾರೆ.

ಕಮಲಾ ನೆಹರೂರವರ ದೇಹ ಸ್ಥಿತಿಯು ಈಗ ಸುಧಾರಿಸುತ್ತಲಿದೆ. ಜ್ವರವು ಕಡಿಮೆಯಾಗಿದೆ. ಅನ್ನಾಹಾರಗಳನ್ನು ಈಗ ಸ್ವಲ್ಪ ಹೆಚ್ಚಾಗಿ ತೆಗೆದುಕೊಳ್ಳುತ್ತಿರುವರು. ಒಟ್ಟಾಗಿ ಅವರ ದೇಹ ಸ್ಥಿತಿಯು ಆಶಾಜನಕವಾಗಿದೆ.

—೦೦೦—

ಲೋಕದ ಅತಿ ಚಿಕ್ಕ ವ್ಯಕ್ತಿ.

ಲೋಕದಲ್ಲಿಯ ಅತೀ ಚಿಕ್ಕ ವ್ಯಕ್ತಿಯೆಂದರೆ ನ್ಯೂಯೋರ್ಕಿನಲ್ಲಿ 1893 ರಲ್ಲಿ ಹುಟ್ಟಿದ್ದ ಲೂಸಿಯಾ ಝರೇಟ್ ಎಂಬವಳು. ಸಂಪೂರ್ಣ ಪ್ರಾಯ ಬಂದ ಮೇಲೆ ಇವಳ ಎತ್ತರ ಬರೇ 20 ಇಂಚಾಗಿದ್ದಿತು. ಸುಪ್ರಸಿದ್ಧ ಕುಳ್ಳನಾದ ಟೋಮ್ ತಂಬನ ಎತ್ತರ 31 ಇಂಚು.

—೦೦೦—

ಜಪಾನಿನಲ್ಲಿ ಗಲಾಟೆ.

ಮಂತ್ರಿ ಮಂಡಲಕ್ಕೆ ಬಾಂಬು ಎಸೆಯುವ ಗೂಢಾಲೋಚನೆ.

ಜಪಾನಿನ ಮಂತ್ರಿ ಮಂಡಲಕ್ಕೆ ಬಾಂಬು ಎಸೆದು ಅಲ್ಲಿನ ರಾಜಕೀಯ ನಾಯಕರನ್ನೆಲ್ಲ ಕೊಲೆ ಮಾಡುವ ಒಂದು ಗೂಢಾಲೋಚನೆಯು ಬಯಲಿಗೆ ಬಂದು ಆ ಪಂಗಡದ 63 ಮಂದಿಗಳನ್ನು ಸೆರೆ ಹಿಡಿದಿರುವರು. ದಸ್ತಗಿರಿ ಮಾಡುವ ಸಮಯದಲ್ಲಿ 4 ಜನರು ಮೃತಪಟ್ಟರು. ಉಳಿದವರನ್ನೆಲ್ಲ ರಾಜದ್ರೋಹಾತ್ಮಕ ತಕ್ಸೀರಿನ ವಿಚಾರಣೆಗಾಗಿ ಬಂಧಿಸಿರುವರು

—೦೦೦—

ಸತ್ಯ ಹೇಳಿಸುವ ದ್ರಾವಕ.

ತಕ್ಸೀರುಗಾರರು ನಡಿಸಿದ ತಕ್ಸೀರುಗಳನ್ನೆಲ್ಲಾ ಅವರಿಂದಲೇ ಹೇಳಿಸುವ ದ್ರಾವಕವೊಂದನ್ನು ಚಿಕಾಗೋ ವಿಶ್ವವಿದ್ಯಾಲಯದ ಮಿ. ಲಿಯೋನಾರ್ಡ್ ಕೀಲರ್ ಎಂಬವರು ತಯಾರಿಸಿರುವರೆಂದು ತಿಳಿದು ಬರುತ್ತದೆ. ಇದನ್ನು ಅಪರಾಧಿಯ ಮೈಗೆ ಚುಚ್ಚಿ ಅವನಿಗೆ ಪ್ರಶ್ನೆ ಹಾಕಿದರೆ ಅತನಿಗೆ ಸತ್ಯ ಹೊರತು ಸುಳ್ಳು ಹೇಳಲಿಕ್ಕೇನೇ ಸಾಧ್ಯವಿಲ್ಲದಂತಾಗುವುದಂತೆ. ಇನ್ನು ಮುಂದೆ ತಕ್ಸೀರು ವಿಚಾರಣೆಗಳಿಗಾಗಿ ಈಗಿನ ಪ್ರಕಾರದ ಸಾಕ್ಷಿ ನುಡಿಯುವಿಕೆಗಳು ಇಲ್ಲವಾಗುವವೇ?

—೦೦೦—

ಅಮೇರಿಕಾದಲ್ಲಿ ಮುಖಂಡರ ಕೊಲೆ.

ಅಮೇರಿಕಾ ಸಂಯುಕ್ತ ಸಂಸ್ಥಾನಕ್ಕೆ ಸೇರಿದ ಲೂಸಿಯಾನಾ ಸಂಸ್ಥಾನದ ಲಿಬರಲ್ ಪಕ್ಷಿಯ ಸೆನೆಟರ್ ಹ್ಯೂಯಿ ಲಾಂಗ್‌ರವರು 1936 ರಲ್ಲಿ ಅಮೇರಿಕಾ ದೇಶದ ಅಧ್ಯಕ್ಷತೆಯ ಚುನಾವಣೆಗೆ ಇಂಡಿಪೆಂಡೆಂಟ್ ಪರವಾಗಿ ಉಮೇದುವಾರರಾಗಿ ನಿಲ್ಲಲು ನಿರ್ಧರಿಸಿದ್ದರು. ಇವರು ತಾ. 9 ನೇ ಸೋಮವಾರ ಲೂಸಿಯಾನಾ ಸಂಸ್ಥಾನದ ಪಾರ್ಲಿಮೆಂಟ್ ಮನೆಯಲ್ಲಿ ಇದ್ದಾಗ ಯಾರೋ ಇವರಿಗೆ ಗುಂಡು ಹೊಡೆದು ಗಾಯಪಡಿಸಿ ಓಡಿದರು. ಹೊಟ್ಟೆಗೆ ತುಂಬಾ ಪೆಟ್ಟಾದ್ದರಿಂದ ತಕ್ಷಣವೇ ಆಸ್ಪತ್ರೆಗೆ ಸಾಗಿಸಿ ಶಸ್ತ್ರಚಿಕಿತ್ಸೆ ಮಾಡಿದ ನಂತರ ಒಂದೆರಡು ದಿವಸಗಳಲ್ಲಿ ಮೃತಪಟ್ಟರು. ನಾಗರೀಕ ರಾಜ್ಯಗಳಲ್ಲೂ ಈ ಕೊಲ್ಲುಕೊಲೆಗಳೇ ?

—೦೦೦—

ಪಂಡಿತ ಜವಾಹಿರ್‌ಲಾಲರ ಭವಿಷ್ಯ.

ಹಸ್ತಪರೀಕ್ಷಕರ ಹೇಳಿಕೆ.

ಪಂಡಿತ ಜವಾಹಿರಲಾಲರು ಕರಾಚಿಯಿಂದ ಜರ್ಮನಿಗೆ ತೆರಳುವ ಮೊದಲು, ಕರಾಚಿಯ ಜೋತಿಷ್ಯ ಶಾಸ್ತ್ರಜ್ಞರಾದ ಡಾಕ್ಟರ್ ಲಾಲಚಂದರವರು, ಪಂಡಿತರ ಹಸ್ತ ನೋಡಿ, ಶ್ರೀಮತಿ ಕಮಲಾ ನೆಹರುಗಳು ರೋಗದಿಂದ ಗುಣಹೊಂದುವರೆಂದೂ, ಪಂಡಿತರು ಹಿಂದೂಸ್ಥಾನದ ರಾಜರಾಗಬೇಕೆಂದು ವಿಧಿಲಿಖಿತವಿರುವುದೆಂದೂ ಭವಿಷ್ಯ ಹೇಳಿದರು. ತನ್ನನ್ನು ರಾಜನೆಂದು ಲಾಲಚಂದರು ಸಂಬೋಧಿಸಿದುದರ ಕುರಿತು ಪಂಡಿತರು ತನ್ನ ವಿರೋಧ ಸೂಚಿಸಿದರು. ಆಗ ಲಾಲಚಂದರು, ರಾಜ ಶಬ್ದದ ಅರ್ಥವು ಪ್ರತ್ಯಕ್ಷ ರಾಜನಾಗುವುದಲ್ಲೆಂದು ಹೇಳಿ, ಪಂಡಿತರು, ಪ್ರಜಾಸತ್ತಾತ್ಮಕ ಹಿಂದುಸ್ಥಾನದ ಮೊದಲನೇ ಅಧ್ಯಕ್ಷರಾಗುವರೆಂದರು.

—೦೦೦—

ಸರ್ಕಾರಕ್ಕೆ ಎರಡು ಸಾರೆ ಸೋಲು.

ರಾಷ್ಟ್ರ ಪಕ್ಷದವರ ಪ್ರಚಂಡ ಜಯ.

'ಕ್ರಿಮಿನಲ್ ಲಾ ಎಮೆಂಡ್‌ಮೆಂಟ್ ಮಸೂದೆ'ಗೆ ಸಮ್ಮತಿಯಿಲ್ಲ.

ಕಳೆದ ವಾರ ಎಸೆಂಬ್ಲಿಯಲ್ಲಿ 'ಕ್ರಿಮಿನಲ್ ಲಾ ಎಮೆಂಡ್‌ಮೆಂಟ್ ಮಸೂದೆ'ಯನ್ನು ಹೋಂ ಮೆಂಬರರು ತಂದರು. ಅದನ್ನು ರಾಷ್ಟ್ರೀಯ ಪಕ್ಷದವರು ಕೂಲಂಕುಷವಾಗಿ ಮಥಿಸಿ ಅದು ದೇಶಕ್ಕೆ ದ್ರೋಹಾತ್ಮಕವಾಗಿದೆಂದು ವಿರೋಧಿಸಿದರು. ಅನಂತರ ತಾ. 12ರಲ್ಲಿ ಅದನ್ನು ಓಟಿಗೆ ಹಾಕಲಾಗಿ ರಾಷ್ಟ್ರಪಕ್ಷದವರ ಪರವಾಗಿ (ಅಂದರೆ ಮಸೂದೆಗೆ ವಿರೋಧವಾಗಿ) 71 ಮತಗಳೂ, ಸರ್ಕಾರದ ಪರವಾಗಿ 61 ಮತಗಳೂ ದೊರೆತದ್ದರಿಂದ ಮಸೂದೆಯು ಪಾಸಾಗಲಿಲ್ಲ. ಆದರೂ ಈ ತಾ. 16ರಲ್ಲಿ ಹೋಂ ಮೆಂಬರರು ಪುನಹ ಮಸೂದೆಯನ್ನು ಸಭೆಯ ಮುಂದಿಟ್ಟು ಅದರ ಪ್ರವೇಶನಕ್ಕೆ ಅನುಮತಿ ಬೇಡಿದರು. ಓಟು ತೆಗೆಯಲಾಗಿ ಪುನಃ 69 ಮಂದಿ ವಿರೋಧವಾಗಿಯೂ, 57 ಮಂದಿ ಪರವಾಗಿಯೂ ಮತಕೊಟ್ಟದ್ದರಿಂದ ಸರಕಾರದ ಪ್ರಯತ್ನಗಳೆಲ್ಲವೂ ಮಣ್ಣುಗೂಡಿದವು. ರಾಷ್ಟ್ರ ಪಕ್ಷದವರ ಜಯವು ಅಭಿನಂದನೀಯವಾಗಿದೆ

—೦೦೦—

ಸಂಕಲ್ಪ ಸಾಧನೆ.

ಕೈಲಾಸ ಪರ್ವತಾರೋಹಣ.

ಯಾರ್ಕ್‌ಷೈರಿನ ಮಿ. ಮಾರಿಸ್ ವಿಲ್‌ಸನ್‌ರವರು ಎವರೆಸ್ಟ್ ಪರ್ವತದ ಮೇಲೆ ಎಲ್ಲಿಯ ವರೆಗೆ ಸಾಧ್ಯವೋ ಅಲ್ಲಿಯ ವರೆಗೂ ವಿಮಾನಯಂತ್ರದಲ್ಲಿ ಕುಳಿತು ಹಾರಿ ಹೋಗಿ ಅಲ್ಲಿಂದ ಮುಂದೆ ಶಿಖರದ ವರೆಗೂ ನಡೆದುಕೊಂಡು ಹೋಗಿ ಯೂನಿಯನ್ ಜಾಕ್ ಬಾವುಟವನ್ನು ಆ ಶಿಖರದಲ್ಲಿ ನೆಟ್ಟು ಬರಬೇಕೆಂದು ಉದ್ದೇಶಿಸಿ ಸರಕಾರದವರ ಅನುಮತಿಯನ್ನು ಬೇಡಿದರು ಅವರು ಅನುಮತಿ ಕೊಡಲಿಲ್ಲ. ಆದಾಗ್ಯೂ ಅವರು ತಮ್ಮ ಇಷ್ಟಾರ್ಥವನ್ನು ನೆರವೇರಿಸಿಕೊಳ್ಳುವ ಉದ್ದೇಶದಿಂದ ಹೊರಟೇ ಹೊರಟರು. ಅನೇಕ ದಿನಗಳ ವರೆಗೂ ಅವರ ಸಮಾಚಾರ ತಿಳಿಯಲೇ ಇಲ್ಲ. ಮಿ. ಇ. ಇ. ಷಿಪ್‌ಟನ್‌ರವರ ನಾಯಕತ್ವದಲ್ಲಿ ಇವರನ್ನು ಹುಡುಕಲು ಹೊರಟವರಿಗೆ ಕಳೆದ ಜುಲೈ ತಾ. 9 ರಲ್ಲಿ ಅವರ ಶವವು ದೊರಕಿತೆಂದೂ ಅದರ ಬಳಿಯಲ್ಲಿ ಒಂದು ಯೂನಿಯನ್ ಜಾಕ್ ಬಾವುಟ, ಒಂದು ನೋಟ್ ಪುಸ್ತಕ ಮತ್ತು ಕೆಲವು ಸಿನಿಮಾ ಫಿಲಂಗಳೂ ದೊರೆತಿರುವದೆಂದೂ ತಿಳಿದಿದೆ.

—೦೦೦—

ಮೈಸೂರು ನಗರದಲ್ಲಿ ಭಿಕ್ಷುಕರು.

ಶಿಕ್ಷಿತ ಯುವಕರೂ ಭಿಕ್ಷುಕರಾಗಿರುವರು.

ಮೈಸೂರು ಯೂನಿವರ್ಸಿಟಿಯ ವಿದ್ಯಾರ್ಥಿಗಳೂ, ರಾಜಧಾನಿಯ ಮುನ್ಸಿಪಾಲಿಟಿಯ ನೌಕರರೂ, ಪ್ರೊಫೆಸರ್ ಕೆ. ಬಿ. ಮಾಧವ, ಮುನ್ಸಿಪಲ್ ಪ್ರೆಸಿಡೆಂಟ್ ಮೆ. ಯಂ. ಎ ಶ್ರೀನಿವಾಸನ್, ಮ. ಟಿ. ಕೃಷ್ಣಮೂರ್ತಿ ಇವರುಗಳೂ ಕೂಡಿ ಸುಮಾರು ನೂರು ಮಂದಿ ಮೈಸೂರು ಸಿಟಿಯಲ್ಲಿ ಎಷ್ಟು ಮಂದಿ ಭಿಕ್ಷುಕರಿದ್ದಾರೆಂಬುದರ ಗಣತಿಯನ್ನು ತಾ. 6 ನೇ ರಾತ್ರಿ ಕಂಡು ಹಿಡಿದರು. ಆಖೈರ್ ಗಣತಿಯಿಂದ ಮೈಸೂರು ಸಿಟಿಯಲ್ಲಿ 828 ಮಂದಿ ತಿರುಪೆಯವರಿದ್ದಾರೆಂದು ತಿಳಿದು ಬಂದಿದೆ. ಮೊದಲು ನಡೆದ ಪ್ರಿಲಿಮಿನರಿ ಸರ್ವೆಯಲ್ಲಿ 1,400 ಜನರಿದ್ದಾರೆಂದು ಹೇಳಲಾಗಿತ್ತು. ಮಳೆ ಸುರಿದು ಕೆರೆಕಟ್ಟೆಗಳಿಗೆ ನೀರು ಬಂದು ವ್ಯವಸಾಯಕ್ಕೆ ಅನುಕೂಲವಾದುದರಿಂದ ಎಷ್ಟೋ ಜನ ವಾಪಸು ಹಳ್ಳಿಗಳಿಗೆ ಹೊರಟು ಹೊರಟು ಹೋಗಿರುತ್ತಾರೆಂದೂ, ಗೌರೀ ಗಣೇಶ ಹಬ್ಬಗಳಲ್ಲಿ ಹಳ್ಳಿಗಳಲ್ಲಿ ವಿಶೇಷ ಧರ್ಮದೊರಕುವುದರಿಂದ ಅದಕ್ಕಾಗಿ ಕೆಲವರು ಸದ್ಯಕ್ಕೆ ಹೋಗಿರುತ್ತಾರೆಂದೂ ಹೇಳಲಾಗಿದೆ. ಮದರಾಸ್ ಯೂನಿವರ್ಸಿಟಿಯ ಒಬ್ಬ ಅಂಡರ್ ಗ್ರಾಜುಯೇಟೂ, ಎಸ್. ಎಸ್. ಎಲ್. ಸಿ. ಮತ್ತು ಲೋವರ್ ಸೆಕೆಂಡರಿ ಪರೀಕ್ಷೆ ಪ್ಯಾಸ್ ಮಾಡಿದ ಅನೇಕ ಯುವಕರೂ ಭಿಕ್ಷಾವೃತ್ತಿಯಿಂದ ಜೀವನ ಮಾಡುತ್ತಿದ್ದಾರೆಂದೂ ಈ ಗಣತಿಯಿಂದ ತಿಳಿದುಬಂದಿದೆ

—೦೦೦—

ಮುಂದಿನ ಯುದ್ಧಗಳ ಭವಿಷ್ಯ.

ಐಗುಪ್ತದ ಸುಪ್ರಸಿದ್ಧ ಜೋತಿಷ್ಯರಾದ ಪ್ರೊಫೆಸರ್ ಸೈಯದ್ ಅಲಿ ಎಂಬವರು ಮುಂದಿನ ಲೋಕಯುದ್ಧದ ಕುರಿತು ಈ ಕೆಳಗಣ ಭವಿಷ್ಯವನ್ನು ಪ್ರಕಟಿಸಿರುವರು ಈ ಭವಿಷ್ಯ ಪ್ರಕಾರ ಇಟೆಲಿ ಮತ್ತು ಅಬಿಸೀನಿಯಗಳೊಳಗಣ ಯುದ್ಧವು ಅಕ್ಟೋಬರ ಮೊದಲನೇವಾರದಲ್ಲಿ ಖಂಡಿತವಾಗಿಯೂ ಆರಂಭವಾಗುವುದು. ಪ್ರಥಮದಲ್ಲಿ ಇಟಲಿಯ ಸೇನೆಯು ಜಯಶೀಲವಾಗುವುದು. ಅಬಿಸೀನಿಯದ ಸ್ವಾತಂತ್ರ್ಯ ಅಪಹಾರಕ್ಕೆ ಇನ್ನು ಸ್ವಲ್ಪವೇ ಸಮಯವಿರುವುದೆನ್ನುವಾಗ, ಇಟಲಿಯ ಸೈನ್ಯದಲ್ಲಿ ಭಯಂಕರ ಸಾಂಕ್ರಾಮಿಕ ರೋಗ ಹಬ್ಬಿ ಅವರು ಹಿಂದೆ ಸರಿಯಬೇಕಾಗುವುದು. ಅನಂತರ ಬರುವ ವರ್ಷ ಮಾರ್ಚ್ ತಿಂಗಳಲ್ಲಿ ಇನ್ನೊಂದು ಲೋಕ ಯುದ್ಧವುಂಟಾಗಿ 1937 ನೇ ಫೆಬ್ರವರಿ ತಿಂಗಳ ವರೆಗೆ ನಡೆಯುವುದು. ಇದರ ಪರಿಣಾಮವಾಗಿ ಯುರೋಪಿನ ನಾಗರೀಕತೆಯೇ ನಿರ್ನಾಮವಾಗುವುದು. ನಂತರ ಯೂರೋಪು ದೈವಭಕ್ತಿಯಿಂದ ವರ್ತಿಸುವುದು.

ಆದರೆ ಇಂಗ್ಲೆಂಡಿನ ಭವಿಷ್ಯಜ್ಞರಾದ ಡಾಕ್ಟರ್ ಟಿ. ಹೆಚ್. ರಿಚಾರ್ಡ್‌ರು, ಇಟಲಿ ಅಬಿಸೀನಿಯಗಳೊಳಗೆ ಯುದ್ಧವೇ ಆಗುವುದಿಲ್ಲೆಂದು ಹೇಳಿರುವರು. ಕ್ವೆಟ್ಟ ಭೂಕಂಪವೇ ಮೊದಲಾದ ಹಲವು ಅನಾಹುತಗಳ ಭವಿಷ್ಯ ಹೇಳಿದವರಿವರು.

ಸಿಲೋನಿನ ಸುಪ್ರಸಿದ್ಧ ಜ್ಯೋತಿಷಿಯಾದ ಶ್ರೀ. ಬಲತಸಿಂಹಲರು, ಇಟಲಿ ಅಬಿಸೀನಿಯಗಳೊಳಗೆ ಯುದ್ಧವೇ ಆಗುವುದಿಲ್ಲೆಂದು ಸ್ಪಷ್ಟಪಡಿಸಿದ್ದಾರೆ. ಈ ವಿಷಯದಲ್ಲವರು ತನ್ನ ಕೀರ್ತಿಯನ್ನೇ ಪಣಕ್ಕೆ ಹಚ್ಚಿರುತ್ತಾರೆ. ಇಟಲಿಯ ರಾಜರ ಮತ್ತು ಮುಸಲೋನಿಯವರ ಜಾತಕಗಳ ಆಧಾರದಿಂದ ಈ ಭವಿಷ್ಯವನ್ನವರು ಹೇಳಿರುವುದು.

—೦೦೦—

ಇಟಲಿ - ಅಬಿಸೀನಿಯಾ.

ಬ್ರಿಟಿಷ್ ಪ್ರತಿನಿಧಿಗಳ ಉದ್ಗಾರ.

ಇಂಗ್ಲೆಂಡಿನ ಪರರಾಷ್ಟ್ರ ಸಚಿವರಾದ ಸರ್ ಸಾಮುವೆಲ್ ಹೋರರು ಜಿನೀವಾದಲ್ಲಿ ನೆರೆದಿರುವ ರಾಷ್ಟ್ರ ಸಂಘದ ಅಧಿವೇಶನದಲ್ಲಿ ಇಟಲಿ - ಅಬಿಸೀನಿಯಾ ಸಮಸ್ಯೆಯ ವಿಷಯ ಬ್ರಿಟನ್ನಿನ ಅಭಿಪ್ರಾಯವನ್ನು ವ್ಯಕ್ತಗೊಳಿಸಿದರು.

ಸಕಲ ರಾಷ್ಟ್ರಗಳ ಸ್ವಾತಂತ್ರ ಮತ್ತು ರಾಷ್ಟ್ರೀಯತ್ವವನ್ನು ಉಳಿಸಬೇಕೆಂಬುದೇ ಇಂಗ್ಲೆಂಡಿನ ಉಚ್ಚ ಉದ್ದೇಶವೆಂದು ಸಾರಿದರು. ರಾಷ್ಟ್ರ ಸಂಘವು ಎಲ್ಲ ಸಣ್ಣ ಪುಟ್ಟ ರಾಷ್ಟ್ರಗಳ ವ್ಯಕ್ತಿತ್ವವನ್ನುಳಿಸಿ ಬಲತ್ಕಾರ ಪ್ರಯೋಗಗಳಾಗದಂತೆ ತೀರ್ಮಾನಗಳನ್ನೀಯಬೇಕೆಂದರು. ಬ್ರಿಟನ್ನು ಭಾರತದ ವ್ಯಕ್ತಿತ್ವಕ್ಕೆ ಎಷ್ಟರ ಮಟ್ಟಿಗೆ ವೃದ್ಧಿಯನ್ನಿತ್ತಿರುತ್ತದೆಂಬದನ್ನೇ ಉದಾಹರಣೆಯಾಗಿ ಹೇಳಿದರು. ರಾಷ್ಟ್ರ ಸಂಘದ ಅಧಿವೇಶನದಲ್ಲಿ ಬ್ರಿಟನಿನ ಪರ ಭಾರತದ ವಿಚಾರ ದೊಡ್ಡ ಪ್ರಚಾರ ನಡೆಸಿದರು. ಸುಭಾಷ್‌ಚಂದ್ರ ಬೋಸರು ಭಾರತದಲ್ಲಿನ ಕಾರ್ಯ ಕಲಾಪಗಳನ್ನು ವಿದೇಶದಲ್ಲಿ ಪ್ರಚಾರ ಮಾಡಬೇಕೆಂದು ಸೂಚನೆಯ ಪ್ರಭಾವವಾಗಿರಬಹುದೋ ಇದು !

ಜರ್ಮನಿಗೆ ಗೊಡವೆ ಬೇಡ.

ಈಗಿನ ಇಟಲಿ—ಅಬಿಸೀನಿಯಾದ ವಿಷಯದಲ್ಲಿ ಜರ್ಮನಿಗೆ ಯಾವ ಪಕ್ಷದ ವಾದವೂ ಬೇಕಿಲ್ಲವಂತೆ! ಜರ್ಮನಿಗೆ ತನ್ನ ಸ್ವಕಾರ್ಯಗಳೇ ಇನ್ನೆಷ್ಟೊ ಇರುವದರಿಂದ ಈ ವಿಷಯದಲ್ಲಿ ಜರ್ಮನಿ ಸರಕಾರವು ಯಾವ ಪಕ್ಷವನ್ನೂ ವಹಿಸುವದಿಲ್ಲವೆಂದು ನಿರ್ಧರಿಸಿರುವದು.

ಮುಸೋಲಿನಿಯವರ ಹೇಳಿಕೆ.

ತಾ. 14 ರಲ್ಲಿ ಇಟಲಿಯ ಮಂತ್ರಿಮಂಡಲದ ಸಭೆಗೂಡಿದ ನಂತರ ಮುಸೋಲಿನಿಯವರು 'ಇಟಲಿಯು ಯೂರೋಪಿನ ರಾಷ್ಟ್ರಗಳೊಂದಿಗೆ ಸದಾ ಮಿತ್ರತ್ವವನ್ನೇ ಬಯಸುತ್ತಲಿದೆ. ಇಟಲಿಯ 'ಫಾಸಿಸ್ಟ್' ತತ್ವಕ್ಕೆ ವಿರೋಧಗಳು ಎಲ್ಲೆಲ್ಲೂ ಕಾಣಬರುವದರಿಂದ ಇಟಲಿ—ಅಬಿಸೀನಿಯಾ ಸಮಸ್ಯೆಯು, ರಾಷ್ಟ್ರ ಸಂಘವೆದುರಿನಲ್ಲಿ ಇಟಲಿಯು ಇಟ್ಟ ದಾಖಲೆಗಳಿಂದಲೂ, ಇಟಲಿಯ ತ್ಯಾಗದಿಂದಲೂ ಇತ್ಯರ್ಥವಾಗುವಂತೆ ಕಂಡುಬರುದಿಲ್ಲ. ಅಬಿಸೀನಿಯಾದವರು ಯುದ್ಧ ಸನ್ನಾಹಗಳನ್ನು ಮಾಡುತ್ತಲಿರುವದರಿಂದ ಇಟಲಿಗೂ ಸಹ ಆಫ್ರಿಕದಲ್ಲಿ ಸೈನ್ಯವನ್ನು ಬಲಪಡಿಸಬೇಕಾಗಿ ಬಂದಿರುತ್ತೆ' ಎಂದು ಮುಂತಾಗಿ ಹೇಳಿರುವರು.

ಇದಕ್ಕೆ ಅಬಿಸೀನಿಯಾದವರ ಜವಾಬು.

'ಇಟಲಿಯವರು ರಾಷ್ಟ್ರಸಂಘವೆದುರಿನಲ್ಲಿಟ್ಟ ದಾಖಲೆಗಳು ಪೂರ್ಣ ಒಪ್ಪತಕ್ಕವಲ್ಲ. ಅವು ಅಪೂರ್ಣಗಳಾಗಿವೆ. ಇಟಲಿ—ಅಬಿಸೀನಿಯಾ ಸಂಬಂಧವಾದ ವ್ಯವಹಾರಗಳಲ್ಲಿ ನ್ಯಾಯವಾದ ವಿಚಾರಣೆಗೆ ಈ ವರೆಗೂ ಅಬಿಸೀನಿಯಾವು ಒಪ್ಪದಿದ್ದಿಲ್ಲ. ಇಟಲಿಯು ತನ್ನ ಮನಬಂದಂತೆ ಅಲ್ಲಲ್ಲಿ ತನ್ನ 'ಕನ್‌ಸಲ್'ಗಳನ್ನು ಸ್ಥಾಪಿಸುತ್ತಲಿದೆ. ಇದರಿಂದ ಅಬಿಸೀನಿಯಾವು ಹೆಚ್ಚು ಸಂಶಯಗ್ರಸ್ತವಾಗಿರುವದು. ಇವರುಗಳ ಈ 'ಕನ್‌ಸಲ್'ಗಳಿಗೆ ಅಬಿಸೀನಿಯಾದವರು ಹೆಚ್ಚು ತೊಂದರೆಗಳನ್ನು ಕೊಡುತ್ತಲಿದೆಯೆಂದು ಎಂದು ಆರೋಪಿಸುತ್ತಲಿರುವರು. ಆದರೆ ಇದೇ ಪ್ರಕಾರ ಬೇರೆ ರಾಷ್ಟ್ರಗಳ 'ಕನ್‌ಸಲ್'ಗಳೂ ಇವೆ. ಆದರೆ ಅವರು ಈ ರೀತಿ ಪುಕಾರು ಮಾಡುತ್ತಲಿಲ್ಲ ' ಎಂದು ಮುಂತಾಗಿ ಮುಸೋಲಿನಿಯವರ ಹೇಳಿಕೆಗಳನ್ನು ತಿರಸ್ಕರಿಸಿರುವರು.

ಇಂಗ್ಲೆಂಡು ಫ್ರಾನ್ಸ್‌ಗಳ ಬಿಡಾರಾಟ.

ಫ್ರಾನ್ಸು, ಅಬಿಸೀನಿಯಾದಲ್ಲಿನ ಫ್ರೆಂಚ್ ಲಿಗೇಷನಿನ ರಕ್ಷಣಾರ್ಥವಾಗಿ 170 ಮಂದಿ ಸೈನಿಕರನ್ನು ಡ್ಜಿಬೌಟಿಗೆ ಕಳುಹಿಸಿರುವದು. ಇಂಗ್ಲೆಂಡು ಮಾಲ್ಟಾದಲ್ಲಿ ವಿಶಿಷ್ಟ ಭದ್ರತೋಪಾಯಗಳನ್ನು ಮಾಡುತ್ತಲಿದೆ. ಇಂಗ್ಲೆಂಡಿನಿಂದ 3 ರೆಜಿಮೆಂಟುಗಳನ್ನು ಕಳುಹಿಸಲಾಗಿದೆ.

ಗಂಧದ ಮರಗಳಿಗೆ ಬೋನಸು ಕೊಡುವ ನಿಬಂಧನೆಗಳ ವಿಚಾರ.

ಬಾಧಕಗಳಲ್ಲದೆ ಸಾಧಕಗಳೇನೂ ಇಲ್ಲ.

ಶನಿವಾರಸಂತೆ ಪಬ್ಲಿಕ್ ಮೀಟಿಂಗು.

—೦೦೦—

(ಕಾಜರಿಸ್ಪವರಿಂದ.)

ರೈತರ ಅನ್‌ರಿಡೀಮ್ಡ್ ಜಾಗಗಳಲ್ಲಿರುವ ಗಂಧದ ಮರಗಳಿಗೆ ಸರ್ಕಾರದವರು ಬೋನಸು ಕೊಡಲು ಏರ್ಪಡಿಸಿರುವ ಕರಡು ನಿಬಂಧನೆಯ ಕನ್ನಡದ ಭಾಷಾಂತರವನ್ನು 30—8—35ರ 'ಕೊಡಗು' ಪತ್ರಿಕೆಯಲ್ಲಿ ಓದಿದೆನು. ಅದರ ಮೇಲೆ ಸಂಪಾದಕರು ಬರೆದಿರುವ ಅವರ ಟೀಕೆಯು ಸಾಧಾರಣ ಮಟ್ಟಿಗೆ ನ್ಯಾಯವಾಗಿದೆ. ಅವರು ನಮೂದಿಸಿರುವುದಕ್ಕಿಂತಲೂ ಹೆಚ್ಚಾದ ಅಡಚಣೆ ಇನ್ನೂ ಅನೇಕವಿರುತ್ತೆ. ಆದರೆ ಸಂಪಾದಕರು ಗಂಧ ಬೆಳೆಯುವ ಈ ಹೋಬಳಿಗಳಲ್ಲಿ ವಾಸವಿಲ್ಲದ್ದರಿಂದ ಗಂಧದ ಸುಖ ದುಃಖದ ಅರಿವು ಅವರಿಗೆ ಕಮ್ಮಿ. ಅದು ಹೇಗೂ ಇರಲಿ. ಅವರು ಇಷ್ಟು ಮಟ್ಟಿಗೆ ಸದರಿ ಕರಡು ನಿಬಂಧನೆಗಳನ್ನು ಕನ್ನಡಕ್ಕೆ ಭಾಷಾಂತರಿಸಿ ಅವರ ಸೂಚನೆಯನ್ನು ಸಕಾಲದಲ್ಲಿ ಪ್ರಕಟಮಾಡಿದ್ದು ರೈತಾಪಿ ಜನರಾದ ನಮ್ಮ ಕಣ್ಣು ತೆರೆದಂತಾಗಿ ಅವರಿಗೆ ನಾವು ಚಿರಋಣಿಯಾಗಿದ್ದೇವೆ. ಆ ಮೇಲೆ ತಾ. 3—9—35ಕ್ಕೆ ಈ ಸಂಬಂಧವಾಗಿ ನಮ್ಮ ಕೌನ್ಸಿಲ್ ಮೆಂಬರು ಒಂದು ಮೀಟಿಂಗು ನಡಿಸುತ್ತಾರೆಂದು ನನಗೆ ತಿಳಿಯಿತು. ಅದೇ ಮೇರೆಗೆ ಆ ಮೀಟಿಂಗಿಗೆ ಅತೀ ಕುತೂಹಲದಿಂದ ಹೋದೆನು. ಶನಿವಾರಸಂತೆ ಶ್ರೀ ಕಂಠೇಶ್ವರ ರೈಸ್ ಮಿಲ್ಲಿನಲ್ಲಿ ಮೀಟಿಂಗು ಕೂಡಿತ್ತು. ಸುಮಾರು 250 ಜನರು ಸೇರಿದ್ದರು.

ಸಭಾಕಾರ್ಯವು ನಡೆಯಬೇಕಾದ ರೀತಿಯಲ್ಲಿ ಪ್ರಾರಂಭವಾಗಿ ಶ್ರೀ ಕಂಠೇಶ್ವರ ರೈಸ್‌ಮಿಲ್ ಮಾಲೀಕರಾದ ಮ. ಗೋಪಾಲಪುರದ ಕಾಳೇಗೌಡರು ಸರ್ವಾನುಮತದಿಂದ ಅಧ್ಯಕ್ಷರಾಗಿ ಆರಿಸಲ್ಪಟ್ಟರು.

ಈಚೆಗೆ ಸರ್ಕಾರದವರು ಪ್ರಕಟಿಸಿರುವ ನಂಬರು 67 ತಾರೀಕು 28—6—35ರ ಗಂಧದ ಮರದ ಬೋನಸು ವಿಚಾರವಾದ ಇಸ್ತಿಹಾರಿನ ಸಾಧಕ ಬಾಧಕಗಳನ್ನು ಚರ್ಚಿಸಿ ಫಲಿತಾಂಶವನ್ನು 28—9—35ರೊಳಗೆ ಹಜರತ್ ಚೀಫ್ ಕಮಿಷನರ್ ಸಾಹೇಬರವರಿಗೆ ತಿಳಿಸಬೇಕಾಗಿರುವುದರಿಂದ ಈ ಸಭೆ ಕೂಡಿದ್ದಾಗಿತ್ತು. ಈ ಸಂಬಂಧವಾಗಿ ಸರ್ಕಾರದವರೊಡನೆ ಹೋರಾಡಿ ರೈತರಿಗಾಗಿ ತುಂಬಾ ಮೇಹನತ್ತು ಮಾಡಿರುವ ಕಾಫಿ ಪ್ಲಾಂಟರ್ ಮ. ನಿಡ್ತ ಸುಬ್ರಮಣ್ಯನವರನ್ನು ಈ ಮುಸೂದೆಯಲ್ಲಿರುವ ಗುಣಾವಗುಣ ವಿವರಿಸಿ ಹೇಳಬೇಕೆಂದು ಅಧ್ಯಕ್ಷರು ಕೇಳಿಕೊಂಡ ಮೇರೆ ಮ. ಸುಬ್ರಮಣ್ಯನವರು ಈ ಕೆಳಗಿನಂತೆ ಮಾತನಾಡಿದರು:—

ಅವರು, ತಾ. 28—8—35ರ 'ಜನ್ಮಭೂಮಿ' ಮತ್ತು ತಾ. 30—8—35ರ 'ಕೊಡಗು' ಪತ್ರಿಕೆಯಲ್ಲಿ ಕನ್ನಡ ಭಾಷಾಂತರವಾಗಿರುವ ಕರಡು ನಿಬಂಧನೆಗಳನ್ನು ಸಭಿಕರ ಅವಗಾಹನೆಗಾಗಿ ವಿವರವಾಗಿ ಓದಿಸಿದ್ದಲ್ಲದೆ ಅವುಗಳಲ್ಲಿರುವ ಶಿರೋಲೇಖನಗಳನ್ನು ಓದಿಸಿ ತಿಳಿಸಿದರು. ಆದರೆ 'ಜನ್ಮಭೂಮಿಯ' ಶಿರೋಲೇಖನದಲ್ಲಿ ರಿಡೀಮ್ಡ್ ಜಾಗದ ಗಂಧಕ್ಕೆ ಪ್ರತಿಫಲ ಸಿಕ್ಕಲು ಆದದ್ದು ಕೌನ್ಸಿಲ್ ಬಂದ ನಂತರವೆಂತ ಅಭಿಪ್ರಾಯಪಟ್ಟಿರುವಂತೆ ಅಲ್ಲವೆಂತಲೂ ಆ ರಿಯಾಯಿತಿಯು ವೇಸ್ಟ್‌ಲ್ಯಾಂಡು ರೂಲ್ಸ್ (1881) ಜಾರಿಗೆ ಬಂದ ಲಾಗಾಯಿತು ಇದೆಯಾದರೂ ರೈತರು ಮಾತ್ರ ಅದರ ಪ್ರಯೋಜನ ಹೊಂದಲು ತಿಳಿದುಕೊಂಡದ್ದು ಬಹಳ ಈಚೆಗೆಂತಲೂ ವಿವರಿಸಿದರು.

ಈಗ ಸರ್ಕಾರದವರು ರೈತರ ಜಾಗದ ಗಂಧದ ಮರಕ್ಕೆ ರೈತನಿಗೆ ಸ್ವಲ್ಪ ಪ್ರತಿಫಲವನ್ನು ಕೊಡಬೇಕೆಂಬ ತತ್ವಕ್ಕೆ ಬಂದಿರುವದಕ್ಕಾಗಿ ಸಂತೋಷಪಡಬೇಕಾದದ್ದೇ ಆದರೂ ಅದಕ್ಕಾಗಿ ಏರ್ಪಡಿಸಿರುವ ನಿಬಂಧನೆಗಳ ಷರತ್ತುಗಳು ತುಂಬಾ ಬಿಕ್ಕಟ್ಟಾಗಿ ರೈತನಿಗೆ ಹಿಂಸಾಯುಕ್ತವೆಂತಲೂ, ಇದರಿಂದ ಹಿತವಾಗಲೀ ಲಾಭವಾಗಲೀ ದೊರೆಯುವಂತೆ ಕಾಣುವುದಿಲ್ಲವಾಗಿಯೂ, ಸದ್ಯ ದೇಶದಲ್ಲಿ ವ್ಯಾಪಿಸಿರುವ ಹಣದ ದುಸ್ಥಿತಿಯಲ್ಲಿ ಪ್ರತಿಯೊಬ್ಬ ಪ್ರಜೆಯೂ ತನ್ನಲ್ಲಿರುವ ಜಮೀನುಗಳನ್ನು ಅಬಾದು ಮಾಡಿ ಉತ್ಪತ್ತಿ ಹೊಂದಲು ಅನೇಕ ಬಾಧೆಗಳು ಪ್ರಾಪ್ತವಾಗಿ ರೈತನು ಕ್ಷೀಣದೆಸೆಗೆ ಬರುತ್ತಿರುವುದು ಸರ್ಕಾರದವರಿಗೆ ಮನವರಿಕೆಯಾಗಿದ್ದಾಗ್ಯೂ ಇಂಥಾ ದರಿದ್ರಾವಸ್ಥೆಯಲ್ಲಿಯೂ ಅವನ ಮೇಲೆ ಭಾರವಾದ ಮತ್ತು ಕೈಲಾಗದ, ಪ್ರತಿಫಲವಿಲ್ಲದ ಜವಾಬ್ದಾರಿಗೆ ಗುರಿಪಡಿಸುವದು ನೀತಿಯಲ್ಲವೆಂತಲೂ ತಿಳಿಸಿದರು. ತಾವು 1924ರಿಂದ 27ರ ವರೆಗೆ ಕೌನ್ಸಿಲು ಮೆಂಬರಾಗಿದ್ದಾಗ ರೈತನಿಗೆ ಅವನ ರಿಡೀಮ್ಡ್ ಜಾಗದ ಗಂಧಕ್ಕೆ ಸಿಕ್ಕುವ ಪ್ರತಿಫಲದಂತೆಯೇ ಅನ್‌ರಿಡೀಮ್ಡ್ ಜಾಗದ ಗಂಧಕ್ಕೂ ಪ್ರಯೋಜನ ಸಿಕ್ಕಬೇಕೆಂತ ಠರಾವು ಮೂಲಕ ಸರ್ಕಾರದವರನ್ನು ಪ್ರಾರ್ಥಿಸಿದ್ದಕ್ಕೆ, ರೈತರಿಗೆ ಸ್ವಲ್ಪ ಪ್ರತಿಫಲ ದೊರಕಬೇಕಾದದ್ದು ನ್ಯಾಯವೆಂತ ಸರ್ಕಾರದವರು ಒಪ್ಪಿ, ಇಂತಿಷ್ಟೇ ಮೊಬಲಗು ಕೊಡಬೇಕೆಂಬದನ್ನು ನಿರ್ಣಯಿಸಲು ಸರ್ಕಾರದವರಿಗೇ ಬಿಡಬೇಕೆಂತ ಹೇಳಿ ತಾವು ಗಂಧದ ಗಿಡ ಲೆಖ್ಖ ಮಾಡಿಸುತ್ತಿರುವದು ಮುಗಿಯುತ್ತಲೇ ಈ ಸಂಬಂಧವಾಗಿ ತಮ್ಮ ನಿರ್ದಿಷ್ಟವಾದ ಅಭಿಪ್ರಾಯ ಹೊರಗೆಡವುತ್ತೇವೆಂತ ಭರವಸೆ ಹೇಳಿದರೆಂತಲೂ, ಸರ್ಕಾರದವರು ಹಿಂದೆ ರೂಢಿಯಲ್ಲಿದ್ದಂತೆ ಸತ್ತ ಮತ್ತು ಸಾಯುತ್ತಿರುವ ಗಂಧವನ್ನೇ ಕೀಳಬೇಕೆಂಬ ಮತ್ತು ಹಾಗೆ ಕೀಳುವ ಪರಿಣಾಮವು ವರ್ಷಕ್ಕೆ 150ರಿಂದ 200 ಟನ್ ಒಳಗೆ ಇರಬೇಕೆಂಬ ತತ್ವವನ್ನು ಬದಲಾಯಿಸಿಕೊಂಡು ಈಚೆಗೆ ದೊಡ್ಡ ದೊಡ್ಡ ಹೊಸ ಕಾಮಗಾರಿಕೆಗಳಿಗೆ ಬಂಡವಾಳ ಶೇಖರಿಸಲು ವರ್ಷಕ್ಕೆ 400 ಟನ್ ವರೆಗೂ ಕೀಳುತ್ತಿರುವುದಲ್ಲದೆ ರೈತರ ಅನ್‌ರಿಡೀಮ್ಡ್ ಜಾಗದಿಂದಲೇ ಹೇರಳವಾಗಿ ಅಂದರೆ ಬಲಿತದ್ದು, ಎಳೇದು ಎಂಬ ವ್ಯತ್ಯಾಸವಿಲ್ಲದೆ, ಕೀಳುತ್ತಿರುವುದು ದೇಶಕ್ಕೂ ರೈತನಿಗೂ ವಿಪರೀತ ನಷ್ಟವಾಗುತ್ತಿದೆಯೆಂದೂ ಉದಾಹರಣೆಗಳಿಂದ ಸರ್ಕಾರದವರಿಗೆ ವಿಷದಪಡಿಸಿ ಒಪ್ಪಿಸಿದ ಮೇಲೆ ಅಲ್ಲಿಂದ ಮುಂದಕ್ಕೆ ಆಂಥ ರೀತಿಯಲ್ಲಿ ಗಂಧ ಕೀಳುವುದಿಲ್ಲವೆಂತ ಭರವಸೆ ಹೇಳಿದರು. ಅದರಂತೆ ಆ ಗಂಧದ ಉತ್ಪತ್ತಿಯನ್ನೇನಾದರೂ ರೈತರ ಕ್ಷೇಮಕ್ಕಾಗಿ ಖರ್ಚು ಮಾಡಿದರೋ ಎಂಬಾಂಶವನ್ನು ವಿಮರ್ಶೆ ಮಾಡಿದಾಗ ಆ ಹಣವೆಲ್ಲಾ ಯಾವುದೋ ಒಂದು ಭಾರೀ ಕಾಮಗಾರಿಗಾಗಿ ಖರ್ಚಾಗಿ ಅದರಿಂದ ಹೆಚ್ಚಾದ ನಷ್ಟವೇ ಪ್ರಾಪ್ತವಾಗಿ ಆ ಕೆಲಸವನ್ನೇ ಆಖೈರಿಗೆ ವರ್ಜ ಮಾಡಿಬಿಟ್ಟರೆಂತಲೂ ಹಾಗೆ ನಷ್ಟವಾದದ್ದು ದೇಶದವರ ದೃಷ್ಟಿಯಿಂದ ಒಂದು ಗಣ್ಯವೋ ಹೇಳದಂತಾಯಿತೆಂತಲೂ, ಅದಕ್ಕಾಗಿ ಈಗ ಯೋಚನೆ ಮಾಡಿದರೆ ಏನೂ ಪ್ರಯೋಜನವಿಲ್ಲವೆಂತಲೂ, ಇನ್ನು ಮುಂದೆ ರೈತರುಗಳು ಬಿತ್ತು ದೇಶದ ಹಣವು ಆ ರೀತಿ ಹೋಗದಂತೆ ನಿಗಾ ಇಟ್ಟುಕೊಳ್ಳಬೇಕಾಗಿಯೂ ಶ್ರುತಪಡಿಸಿದರು. ಹಾಗೆ ನಷ್ಟವಾದದ್ದೂ ಅಲ್ಲದೆ ಅದರ ಈಚೆಗೂ ಸಹ ಹೆಚ್ಚಾಗಿಯೇ ಗಂಧ ಕಿತ್ತಿದ್ದಾರೆಂತ ಸರ್ಕಾರದ ಅಂಕೆಗಳನ್ನು ಈ ಕೆಳಗೆ ಕಂಡಂತೆ ನಮೂದಿಸಿದರು.

1926 ರಿಂದ 1934 ರ ವರೆಗೆ	ಟ.	ಹ.	ಕ್ವಾ	ಪೌ.
1. ರಿಜರ್ವ್ ಫಾರೆಸ್ಟು ಮತ್ತು ಗಂಧದ ತೋಟದಿಂದ	229	14	0	23½
2. ಪೈಸಾರಿ ಜಾಗದಿಂದ	1001	2	3	2
3. ರೈತರ ರಿಡೀಮ್ಡ್ ಜಾಗದಿಂದ	69	18	1	21
4. ,, ಅನ್‌ರಿಡೀಮ್ಡ್ ,,	1018	2	3	2

ಈ ಲೆಖ್ಖವನ್ನು ನೋಡಿದ್ದೇ ಆದರೆ ಈಚೆಗೂ ಸಹ ರೈತನ ಖಾಸಗೀ ಜಾಗದಿಂದಲೇ ಹೆಚ್ಚಾಗಿ ಗಂಧ ಕೀಳಲ್ಪಟ್ಟಿದೆಯೆಂಬದೂ, ಅದಕ್ಕಾಗಿ ಅವನಿಗೆ ಒಂದು ಕಾಸೂ ಇದು ವರೆಗೆ ಪ್ರಯೋಜನವಾಗಿಲ್ಲವೆಂಬದೂ ಎಲ್ಲರಿಗೂ ತಿಳಿಯುವ ಸಂಗತಿಯಲ್ಲವೇ ?

ಮೇಲ್ಕಂಡಂತೆ ಹೆಚ್ಚು ಭಾಗ ರೈತರ ಅನ್‌ರಿಡೀಮ್ಡ್ ಜಾಗದಲ್ಲಿ ಕೀಳಲ್ಪಟ್ಟಿರುವುದರಿಂದ ಇನ್ನು ಕೀಳಲಿಕ್ಕೆ ಉಳಿದಿರುವುದು ಎಳೇ ಗಂಧದ ಮರಗಳೇ ಹೆಚ್ಚಾಗಿರುವುದರಿಂದ ಈ ಮುಸೂದಾ ಕ್ರಮಗಳಂತೆ ಪ್ರತಿಫಲ ಹೊಂದಬೇಕಾದರೆ ರೈತನು ಇನ್ನೂ ಮುಂದೆ ಅನೇಕ ವರ್ಷ ಕಾಯಬೇಕಾಗಿದೆ. ಉಳಿದಿರುವ ಬಲಿತ ಅಂದರೆ 35 ಇಂಚು ಸುತ್ತಳತೆಯುಳ್ಳ ಮತ್ತು ಅದಕ್ಕೆ ಮೇಲ್ಪಟ್ಟ ಸುತ್ತಳತೆಯುಳ್ಳ ಮರಗಳಿಗೆ 1942ನೇ ಇಸವಿ ವರೆಗೂ ದೊರೆಯುವಂತಿಲ್ಲ. ಮತ್ತು ಜೀವಂತ ಮರಗಳಿಗೆ ಬೋನಸು ಇಲ್ಲವೇ ಇಲ್ಲ. ಸತ್ತದ್ದಕ್ಕೆ ಮಾತ್ರವಂತೆ. ಬೋನಸಿಗೆ ರೈತನು ಅರ್ಹನಾಗಬೇಕಾದರೆ 1936 ನೇ ಇಸವಿ ಜುಲೈಯೊಳಗೆ ತನ್ನ ಹಿಡುವಳಿಯಲ್ಲಿರುವ ಗಂಧದ ಮರಗಳ ಲೆಖ್ಖ ಮತ್ತು ಅಳತೆ ಸಹ ಈಗಲೇ ತಯಾರಿಸಿ ಕೊಡಬೇಕಂತೆ. ಹಾಗೆಂದರೆ ಅವನು ಹೀಗೆ ಲೆಖ್ಖ ಕೊಡದೆ ಹೋದರೆ ಅವನಿಗೆ ಬೋನಸು ಸಿಕ್ಕಲಾರದೆಂತ ಅರ್ಥಮಾಡಬೇಕಾಗುತ್ತೆ. ಲೆಖ್ಖ ಕೊಡದ ಮಾತ್ರಕ್ಕೆ ಅವನನ್ನು ಅನರ್ಹನನ್ನಾಗಿ ಮಾಡುವದು ಯಾವಧರ್ಮ. ಹೀಗೆ ಲೆಖ್ಖ ಕೊಡಬೇಕೆಂತ ರೂಲ್ಸ್ ಜಾರಿಗೆ ಬರುವ ಮೊದಲೇ ರೈತರನ್ನು ಈಗಿನಿಂದಲೇ ಪತ್ರಾಯಿಪಡಿಸುತ್ತಿದ್ದಾರೆಂತ ಕೇಳುತ್ತೇನೆ. ಇದು ಕೂಡ ಸರ್ಕಾರದವರ ನೀತಿಗೆ ವ್ಯತಿರಿಕ್ತವಾದದ್ದು. ಇದನ್ನೆಲ್ಲಾ ನೋಡಿದರೆ 1942ನೇ ಇಸವಿಯೊಳಗೆ ರೈತನಿಗೆ ಬೋನಸು ಸಿಕ್ಕಬಹುದಾದರೂ, ಗಂಧದ ಗಿಡಗಳು ಅವನ ಜಾಗದಲ್ಲಿದ್ದರೂ, ಅದರ ಲಾಭಾಂಶ ರೈತನಿಗೆ ಇಲ್ಲದಂತೆ ಹವಣಿಸಿದ್ದಾರೆಂತ ಅರ್ಥಮಾಡಬೇಕಾಗಿದೆ. ರೈತನಿಗೆ ಈ ರೂಲ್ಸ್ ಜಾರಿಗೆ ಬಂದ ಕೂಡಲೇ ಏನಾದರೂ ಪ್ರತಿಫಲ ಸಿಕ್ಕುವಂತೆ ಏರ್ಪಾಡು ಮಾಡಿದ್ದರೆ ತುಂಬಾ ಗುಣವಿತ್ತು. ಅದರ ಬದಲು ಎಳೇ ಗಿಡ ಕಾಪಾಡುವ ಜವಾಬ್ದಾರಿ ಮಾತ್ರ ಈಗಿನಿಂದಲೇ ಅವನ ಮೇಲೆ ಹೊರಿಸಿದಂತಾಗಿದೆ. ಇನಲ್ಲದೇ ಗಂಧವು ರಾಜರ ಕಾಲದಿಂದಲೂ ಸರ್ಕಾರದವರ ಸ್ವತ್ತೇ ಆಗಿದೆಯೆಂತ ಹೇಳುವದಾದರೂ ಅವುಗಳ ಪೋಷಣೆ ಮತ್ತು ನಿಗಾ ಮಾಡುವ ಜವಾಬ್ದಾರಿಯು ರೈತನಿಗೆ ಇರಲಿಲ್ಲ. ಕಾರಣಾಂತರದಿಂದ ನಾಶವಾದ ಮರಗಳಿಗೂ ಕೂಡ ರೈತರನ್ನು ಗುರಿಪಡಿಸುತ್ತಿರಲಿಲ್ಲ. ಇದರಿಂದ ರೈತರಿಗೆ ತುಂಬಾ ನೆಮ್ಮದಿ ಇತ್ತು. ಈಗಿನ ಕರಡು ರೂಲ್ಸ್‌ಗಳಂತೆ ರೈತನು ಸರ್ಕಾರದವರ ಸಲಹೆಯಂತೆ ಗಂಧವನ್ನು ಬೆಳೆಸುವುದೂ, ಕಾಪಾಡುವದೇ ಅವನ ಸ್ವಂತ ಕೆಲಸಗಳ ಪೈಕಿ ಮುಖ್ಯವಾಗುವದಲ್ಲದೆ ಅವುಗಳಿಗೆ ಸ್ವಾಭಾವಿಕವಾಗಿ ಸಂಭವಿಸಬಹುದಾದ ಅನೇಕ ಉಪಹತಿಗಳಿಂದ ರೈತನಿಗೆ ಅಪಾಯ ತಟ್ಟುವದಾದಕಾರಣ ರೈತನು ಗಂಧದ ಪೋಷಣೆಗಾಗಿಯೇ ತನ್ನ ಜಮೀನು ಹಾಳುಬಿಡಬೇಕಾದೀತೆಂತಲೂ ತನ್ನ ವ್ಯವಸಾಯವೇ ಮೊದಲಾದ ಇದರ ಸ್ವಂತ ಕೆಲಸಗಳಿಗಿಂತಲೂ ಇದಕ್ಕೇ ಹೆಚ್ಚು ನಿಗಕೊಡಬೇಕಾದೀತೆಂತಲೂ ಇತ್ಯಾದಿ ಅಡಚಣೆಗಳಿರುವುದರಿಂದ ತಾನು ಕಂದಾಯ ತೆತ್ತು ಸರ್ಕಾರದ ಲಾಭಕ್ಕಾಗಿ ತನ್ನ ಜಮೀನು ಹಾಳುಬಿಟ್ಟುಕೊಂಡು ಗಂಧದ ರಕ್ಷಣೆ ಮಾಡಲು ಹೇಸ ಹೊಸದಾಗಿ ಇಂಥ ರೂಲ್ಸ್ ಏರ್ಪಡಿಸುವುದು ರೈತನ ಅಭ್ಯುದಯವನ್ನು ಹೆಚ್ಚಿಸುವದರ ಬದಲು ರೈತನನ್ನು ಹೀನದೆಸೆಗೆ ಇಳಿಸಿದಂತಾಗುತ್ತೆಂತ ಅಭಿಪ್ರಾಯ ಪಟ್ಟರೆ ತಪ್ಪಾಗಲಾರದು

ಈಚೆಗೆ ಫಾರೆಸ್ಟು ಇಲಾಖೆಯವರು ಗಂಧವನ್ನು ಬೆಳೆಸಬೇಕೆಂತ ಎಳೆ ಗಿಡಗಳನ್ನು, ಅವು ಸ್ವಾಭಾವಿಕವಾಗಿ ಬೆಳೆಯುವುದನ್ನು ತಪ್ಪಿಸಿ ಕಿತ್ತು ಗಂಧ ವಿರಳವಾಗಿರುವ ಜಾಗಗಳಲ್ಲಿ ನೆಡುತ್ತ ಇದ್ದಾರೆಂಬದನ್ನು ನಿನ್ನೆ ದಿನ ನೋಡಿದೆನೆಂತಲೂ ಹಾಗೆ ನೆಡುವುದಕ್ಕೆ ಇದು ಸಮಯವಲ್ಲವೆಂತಲೂ, ಕೀಳುತ್ತಾ ಇರುವ ರೀತಿಯೂ ಸರಿಯಾಗಿಲ್ಲವೆಂತಲೂ, ಇದರಿಂದ ನಷ್ಟವೇ ಹೊರತು ಲಾಭವಿಲ್ಲವೆಂತಲೂ ಹಿಂದೆಯೂ ಇದೇ ರೀತಿ ಗಂಧ ಬೆಳೆಸಲು ಮತ್ತು ಅಭಿವೃದ್ಧಿಪಡಿಸಲು 'ಟೌಂಗ್ಯ' ಎಂಬ ಒಂದು ಹೊಸ ಪದ್ಧತಿ ಜಾರಿಯಲ್ಲಿ ತಂದಾಗ ರೈತರು, ಆ ಹೊಸ ರೀತಿಯಿಂದ ಗಂಧದ ಬೆಳವಣಿಗೆಗೆ ಏನು ದಕವೇ ಹೊರತು ಪ್ರಯೋಜನವೇನೂ ಇಲ್ಲವೆಂತ ತಿಳಿಸಿದಾಗ್ಯೂ ಅವರು ಅದಕ್ಕೆ ಗಮನಕೊಡದೆ ತಮ್ಮ ರೀತಿಯನ್ನೇ ಅನುಸರಿಸಿ ಅದರಿಂದ ತುಂಬಾ ನಷ್ಟಪ್ರಾಪ್ತವಾಗಿರುವದು ಈಗ್ಯೂ ಕಂಡು ಬರುತ್ತಾ ಇದೆ. ಅದಕ್ಕೆ ಬದಲಾಗಿ ಬೀಜ ಹಾಕಿ ಸಸಿ ಎಬ್ಬಿಸಿಕೊಂಡು ಅವುಗಳನ್ನು ಮಿಷನ್‌ನಿಂದ ಹೆಪ್ಪು ಸಹಿತ ಕಿತ್ತು ಬೇರೆ ಕಡೆ ನೆಟ್ಟರೆ ಗಂಧ ವೃದ್ಧಿಯಾಗುವ ಸಂಭವವಿರಬಹುದೇ ಹೊರತು ಈಗಿನಂತೆ ಎಳೆ ಗಿಡ ಹೆಪ್ಪಿಲ್ಲದೆ ಈ ಅಕಾಲದಲ್ಲಿ ಕಿತ್ತು ನೆಟ್ಟರೆ ಅದು ಬದುಕುವುದಿಲ್ಲವಾಗಿ ಈ ಪದ್ಧತಿಯನ್ನು ಈ ಕೂಡ್ಲೆ ಸಮ್ಮಂಧಪಟ್ಟ ಅಧಿಕಾರಿಗಳು ನಿಲ್ಲಿಸಬೇಕೆಂತ ಸೂಚಿಸಿದರು. ಆದ್ದರಿಂದ ಈಗಿನ ಸ್ಥಿತಿಯಲ್ಲಿ ಗಂಧದ ಮರಗಳ ಪೋಷಣೆ ವಿಷಯವಾಗಿ ಸರ್ಕಾರದವರು ಇಂಥ ನಿಬಂಧ ರೂಪವಾದ ಖಾಯಿದೆ ಕಾನೂನುಗಳನ್ನು ಈಗಲೂ ಇನ್ನು ಮುಂದೆಯೂ ಜಾರಿಯಲ್ಲಿ ತರಕೂಡದೆಂತಲೂ ಹಾಗೆ ಏನಾದರೂ ರೂಲ್ಸು ಏರ್ಪಡಿಸಬೇಕಾದರೆ ಗಂಧದ ಮರ ಹೆಚ್ಚಾಗಿ ಬೆಳೆಯುವ ಪ್ರದೇಶದ ರೈತರುಗಳಿಂದ ಚುನಾಯಿತರಾದ ಹೆಚ್ಚು ಸದಸ್ಯರನ್ನುಳ್ಳ ಅಂದರೆ ನಾನ್ ಅಫೀಷಿಯಲ್ ಮೆಜಾರ್ಟಿಯುಳ್ಳ ಒಂದು ಸಮಿತಿಯನ್ನು ಏರ್ಪಡಿಸಿ, ಅವರು ದೇಶವನ್ನೆಲ್ಲಾ ಸುತ್ತಿ ರೈತರ ಹೇಳಿಕೆಗಳನ್ನು ಕೇಳಿ ಆ ಮೇಲೆ ಅವರು ಕೊಡುವ ಸಲಹೆಯಂತೆ ಕಾನೂನು ಮಾಡಬೇಕೆಂತಲೂ, ಜಾರಿಗೆ ತರಲಿರುವ ಕರಡು ನಿಬಂಧನೆಗಳು ತುಂಬಾ ಅಸಮರ್ಪಕವಾಗಿರುವ ಕಾರಣ ಅವುಗಳನ್ನು ಪತ್ರಗಳ ಮುಖೇನ ಎಷ್ಟು ವಿವರಿಸಿದರೂ ಚೀಫ್ ಕಮಿಷನರವರಿಗೆ ಮುಂಡಟ್ಟಾಗಲು ಕ್ರಮವಾಗಬಹುದಾದ್ದರಿಂದ ಅನುಭವವುಳ್ಳ ಈ ಪ್ರಾಂತ್ಯದ ಕೆಲವು ಮುಖಂಡರು ಕೂಡ್ಲೆ ಖುದ್ದಾಗಿ ಹೋಗಿ ಚಿ. ಕಮಿಷನರಿಗೆ ಈ ತೊಂದರೆಗಳನ್ನೆಲ್ಲಾ ಕೂಲಂಕುಷವಾಗಿ ವಿವರಿಸಿದರೆ ಅವರು ರೈತರಿಗೆ ಇರುವ ಕಷ್ಟ ಪರಿಹಾರಮಾಡಿಯಾರೆಂದು ತಮಗೆ ನಂಬಿಕೆಯಿದೆಯೆಂತಲೂ, ಹೇಳಿ ತಮ್ಮ ಭಾಷಣವನ್ನು ಮುಕ್ತಾಯಗೊಳಿಸಿದರು.

ಅನಂತರ ಸಭಿಕರಲ್ಲಿ ಅನೇಕರು ಇನ್ನೂ ಹೆಚ್ಚಾಗಿ ಚರ್ಚೆ ಮಾಡಿ ಮೇಲ್ಕಂಡ ಸಲಹೆಗಳನ್ನು ಠರಾವು ಮೂಲಕವಾಗಿ ಪಾಸುಮಾಡಿದ ನಂತರ ಸಭೆಯು ಬರಕಾಸ್ತಾಯಿತು.

ಇದೇ ರೀತಿ ಈ ತಾಲೋಕಿನ ಅನೇಕ ಕಡೆಗಳಲ್ಲಿ ಸಭೆ ಸೇರಿ ಜನರ ಅಭಿಪ್ರಾಯವನ್ನು ಸರಕಾರದವರ ಗಮನಕ್ಕೆ ತರಲು ತಕ್ಕ ಸಮಯದಲ್ಲಿ ದೇಶದ ಮುಂದಾಳುಗಳು ಪ್ರಯತ್ನಪಡುತ್ತಾರೆಂತ ನಂಬಿದ್ದೇನೆ.

ಡಾಕ್ಟರ್ ಮೇತ್ಯೂಸ್ ಎಬ್ರಹಾಮ್.

ದಂತ ವೈದ್ಯರು.

ಗೀತಾಂಜಲಿ ಬಂಗ್ಲೆ.

(ಪೋಸ್ಟಾಫೀಸು ಎದುರುಗಡೆ.)

ಸಕಲ ಹಲ್ಲು ನೋವುಗಳನ್ನು ಶೀಘ್ರವಾಗಿ ಗುಣಪಡಿಸುವರಲ್ಲದೆ, ಸುಂದರವಾದ ಕೃತ್ರಿಮ ಹಲ್ಲುಗಳನ್ನು ಮನೆ ಒಪ್ಪುವಂತೆ ಕಟ್ಟುವರು. ಒಮ್ಮೆ ಪರೀಕ್ಷಿಸಿದಲ್ಲಿ ತಿಳಿಯುವುದು. [52—52]

ಕೊಡಗು

ಸಪ್ಟಂಬರ್ ತಾ. ೨೦ ನೇ ಶುಕ್ರವಾರ ೧೯೩೫.

'ಕ್ರಿಮಿನಲ್ ಲಾ ಎಮೆಂಡ್ಮೆಂಟ್ ಬಿಲ್.'

ಕಾಂಗ್ರೆಸು ಪಕ್ಷದವರು ಎಸೆಂಬ್ಲಿ ಸಭೆಯನ್ನು ಪ್ರವೇಶ ಮಾಡಿದ ಮೇಲೆ ಅದರ ಕಾರ್ಯ ಕಲಾಪಗಳಲ್ಲಿ ಒಂದು ಹೊಸ ಚೈತನ್ಯವು ಉಂಟಾಗಿದೆಯೆಂಬುದರಲ್ಲಿ ಸಂದೇಹವಿಲ್ಲ. ಮೊದಲು ಈ ಸಭೆಯಲ್ಲಿ ನಡೆಯುತ್ತಿದ್ದ ಚರ್ಚೆಗಳು ನಿರಸವಾಗಿದ್ದವು. ಆದರೆ ಇತ್ತಲಾಗಿ ಜನರ ನಿಜವಾದ ಪ್ರತಿನಿಧಿಗಳು ಎಸೆಂಬ್ಲಿಯಲ್ಲಿ ಸರ್ಕಾರದ ವರ್ತನೆಯನ್ನು ಕುರಿತು ಮಾಡುತ್ತಿರುವ ಟೀಕೆಗಳೂ, ಸರ್ಕಾರಿ ಮೆಂಬರುಗಳಿಗೂ ವಿರೋಧಪಕ್ಷದವರಿಗೂ ಆಗುತ್ತಿರುವ ವಾಗ್ವಾದಗಳೂ ಓದಲು ಬಹು ಮನೋರಂಜಕವಾಗಿವೆ ಮತ್ತು ಅವು ಎಸೆಂಬ್ಲಿಯ ಚರ್ಚೆಗಳಲ್ಲಿ ಜನರಿಗೆ ಹೆಚ್ಚಿನ ಅಭಿರುಚಿಯನ್ನುಂಟುಮಾಡುತ್ತಿವೆ. ಈ ಮುನ್ನ ಸರ್ಕಾರದವರು ತಮಗೆ ಬೇಕಾದ ಕಾಯಿದೆಗಳನ್ನೂ, ತೀರ್ಮಾನಗಳನ್ನೂ ಸುಲಭದಲ್ಲಿ ಪಾಸು ಮಾಡಿಕೊಳ್ಳುತ್ತಿದ್ದರು. ಆದರೆ ಈಗ ಸರ್ಕಾರಕ್ಕೆ ಎದುರು ಪಕ್ಷದ ಪಾರ್ಟಿಯಲ್ಲಿ ನಿಂತಿರುವ ಕಾಂಗ್ರೆಸ್‌ನವರನ್ನು ತಮ್ಮ ಕಡೆ ಒಲಿಸಿಕೊಳ್ಳುವುದು ಸಾಧ್ಯವಿಲ್ಲವಾಗಿದೆ ಮಾತ್ರವಲ್ಲ, ಸರ್ಕಾರದವರು ಹಲವು ಸಾರಿ ಬಹುಮತದಿಂದ ಸೋಲಿಸಲ್ಪಡುತ್ತಿರುವರು.

ಈ ಸಾರಿ ಎಸೆಂಬ್ಲಿ ಮೀಟಿಂಗು ಈ ತಾ. 2 ರಲ್ಲಿ ಪ್ರಾರಂಭವಾಯಿತು. ಪ್ರಾರಂಭದಲ್ಲೇ ಸರ್ಕಾರದವರಿಗೆ ಎರಡು ಸೋಲುಗಳು ದೊರೆತವು. 'ಲೋಕೊಮೋಟಿವ್ ಇಂಜಿನ್'ಗಳನ್ನು ಇಂಡಿಯಾದಲ್ಲಿಯೇ ತಯಾರಿಸಬೇಕೆಂಬ ವಿಷಯವನ್ನು ಸರ್ಕಾರಕ್ಕೆ ಮನವರಿಕೆ ಮಾಡುವ ಉದ್ದಿಶ್ಯದಿಂದ ಶ್ರೀ ಸ್ವಾಮಿ ವೆಂಕಟಾಚಲಂ ಚೆಟ್ಟಿಯಾರವರೂ, ವಾಯುವ್ಯ ಪ್ರಾಂತ್ಯದ ಗಡಿಯಲ್ಲಿರುವ ಜನರ ಮೇಲೆ ಇಂಡಿಯಾ ವಿಮಾನ ಸೈನ್ಯದವರು ಬಾಂಬುಗಳನ್ನು ಎಸೆದದನ್ನು ಖಂಡಿಸಲಿಕ್ಕಾಗಿ ಡಾ. ಖಾನ್ ಸಾಹೇಬ್‌ರವರೂ ಈ ಸಭೆಯಲ್ಲಿ 'ಎಡ್ಜರ್ನ್‌ಮೆಂಟು' ಠರಾವುಗಳನ್ನು ತಂದಿದ್ದರು. ಇವೆರಡು ಠರಾವುಗಳಲ್ಲಿಯೂ ಸರ್ಕಾರಿ ಪಕ್ಷದವರು ಸೋಲಿಸಲ್ಪಟ್ಟರು. ಆದುದರಿಂದ ಈ ಸಾರಿಯ ಎಸೆಂಬ್ಲಿಯ ಸುರುವೇ ಸರ್ಕಾರದವರಿಗೆ ಶುಭದಾಯಕವಾಗಿರಲಿಲ್ಲ.

ಎಸೆಂಬ್ಲಿ ಸಭೆಯ ಈ ಸಲದ ಪ್ರಾಮುಖ್ಯ ಕಾರ್ಯವು 'ಕ್ರಿಮಿನಲ್ ಲಾ ಎಮೆಂಡ್‌ಮೆಂಟ್ ಬಿಲ್''ನ ಚರ್ಚೆಯಾಗಿತ್ತು. 1930 ರಲ್ಲಿ ಸವಿನಯ ಕಾಯಿದೆ ಭಂಗ ಚಳವಳವು ಸುರುವಾಗಲ್ಪಟ್ಟಾಗ್ಯೆ ವೈಸರಾಯರು ತಮಗಿದ್ದ ವಿಶೇಷ ಅಧಿಕಾರವನ್ನು ಚಲಾಯಿಸಿ, ಆರ್ಡಿನೇನ್ಸ್‌ಗಳನ್ನು ಜಾರಿಗೆ ತಂದರು. ಸತ್ಯಾಗ್ರಹವು 1932 ರಲ್ಲಿ ಪುನಹ ಪ್ರಾರಂಭವಾದಾಗ್ಯೆ ವೈಸರಾಯರ ಆರ್ಡಿನೇನ್ಸ್‌ಗಳು ಸಾಲದೆಂದು ಕ್ರಿಮಿನಲ್ ಲಾವನ್ನು ತಿದ್ದುಪಡಿ (ಎಮೆಂಡ್‌ಮೆಂಟ್) ಮಾಡಿದ ಆಕ್ಟನ್ನು ಜಾರಿಗೆ ತಂದರು. ಜಾರಿಗೆ ತರುವ ಮುಂಚೆ ಈ ಮಸೂದೆಯು ಎಸೆಂಬ್ಲಿಯಲ್ಲಿ ಚರ್ಚಿಸಲ್ಪಟ್ಟಿತು. ಆಗ್ಯೆ, ಭಾರತ ಭೂಮಿಯ ವೀರ ಪುತ್ರ ಪುತ್ರಿಯರು ಮಾತೃಭೂಮಿಯ ಸ್ವಾತಂತ್ರ್ಯಕ್ಕಾಗಿ ಸ್ವಾರ್ಥತ್ಯಾಗ ಮಾಡಿ ಲಾಠಿ ಪೆಟ್ಟಿಗೆ ಗುರಿಯಾಗುತ್ತಲೂ, ಜೈಲು ವಾಸವನ್ನು ಅನುಭವಿಸುತ್ತಲೂ ಕಠಿಣ ತರಹದ ಕಷ್ಟನಷ್ಟಗಳನ್ನು ಸಹಿಸುತ್ತಿಸುದ್ದಾಗ್ಯೆ, ಎಸೆಂಬ್ಲಿಯವರು ಈ ಕಠಿಣ ಕಾಯಿದೆಗೆ ಬಹುಮತದಿಂದ ಸಮ್ಮತಿಯನ್ನಿತ್ತರು ಆದರೆ ಈ ಆಕ್ಟಿಗೆ ಮೂರು ವರ್ಷದ ಜೀವದಾನ ಮಾತ್ರ ಮಾಡಲಾಗಿತ್ತು. ಈ ಅವಧಿಯು ಬರುವ ಡಿಸೆಂಬರು 18 ರಲ್ಲಿ ಮುಗಿಯುತ್ತದೆ. ಆದುದರಿಂದ ಈ ತಾತ್ಕಾಲಿಕ ಆಕ್ಟನ್ನು ಖಾಯಂ ಮಾಡಿಕೊಳ್ಳುವ ಉದ್ದೇಶದಿಂದ ಸರ್ಕಾರದವರು ಅದನ್ನು ಈಗ ಪುನಹ ಎಸೆಂಬ್ಲಿಯ ಮುಂದಿಟ್ಟದ್ದಾಗಿದೆ.

ಈ ಮಸೂದೆಯನ್ನು ಕುರಿತು ತಾ. 5ರಿಂದ 13ರ ವರೆಗೆ ದೀರ್ಘ ಚರ್ಚೆ ನಡೆಯಿತು. ಸರ್ಕಾರಿ ಪಕ್ಷದವರೂ, ಕಾಂಗ್ರೆಸ್ ಪಕ್ಷದವರೂ ತಮ್ಮ ಉತ್ತಮವಾದ ಭಾಷಣಗಳನ್ನು ಮಾಡಿದರು. ಮಸೂದೆಯನ್ನು ಮುಂದಿಡುತ್ತಾ ಸರ್ಕಾರಿ ಹೋಮ್ ಮೆಂಬರರು—'ಜನಸಮುದಾಯದ ಹಿತಕ್ಕಾಗಿ ಭರತ ಖಂಡದ ಶಾಂತಿ ಪರಿಪಾಲನೆಗೆ ಈ ಶಾಸನವು ಅಗತ್ಯ. ಈ ಖಾನೂನು ಮಾಡಿದ್ದು ಸತ್ಯಾಗ್ರಹ ಚಳವಳವನ್ನು ಮಾತ್ರ ಅಡಗಿಸಲಿಕ್ಕಲ್ಲ; ಕ್ರಾಂತಿಕಾರರ ಚಳವಳ, 'ಕಮ್ಯೂನಿಸ್ಟ್' ಚಳವಳ ಮತ್ತು ಇತ್ತೀಚೆಗೆ ಹೆಚ್ಚಾಗಿರುವ ಕೋಮುವಾರು ವಿದ್ವೇಷಗಳನ್ನು ಎದುರಿಸಲಿಕ್ಕಾಗಿಯೂ ಆಗಿದೆ. ಸತ್ಯಾಗ್ರಹವು ತಾತ್ಕಾಲ ಹಿಂತೆಗೆಯಲ್ಪಟ್ಟಿದೆಯಲ್ಲದೆ ಖಾಯಂ ಆಗಿ ನಿಲ್ಲಿಸಲ್ಪಟ್ಟಿರುವುದಿಲ್ಲ. ಸರ್ಕಾರಕ್ಕೂ ತೊಂದರೆಯನ್ನುಂಟುಮಾಡುವ ವೃತ್ತಪತ್ರಿಕೆಗಳ ಮೇಲಿರುವ ನಿರ್ಬಂಧವನ್ನು ಸಡಿಲಿಸಿದರೆ ಕ್ರಾಂತಿಗೂ, ಕಮ್ಯೂನಿಸ್ಟ್ ಮತ್ತು ಕೋಮುವಾರು ಚಳವಳಗಳಿಗೂ ತುಂಬಾ ಉತ್ತೇಜನ ದೊರೆಯುವುದು. ಈಗಿನ ಸರ್ಕಾರಕ್ಕೆ ಅನುಭವದಲ್ಲಿ ಅಗತ್ಯವೆಂದು ಕಂಡು ಬಂದಿರುವ ಕಾಯಿದೆಯನ್ನು ಮುಂದೆ ಬರುವ ಹೊಸ ಸರ್ಕಾರದ ಉಪಯೋಗಕ್ಕಾಗಿ ಮಾಡಿಡುವದು ಅವಶ್ಯ ಎಂಬ ಮುಂತಾದ ಕಾರಣಗಳನ್ನು ಕೊಟ್ಟರು.

ಜನಸಮುದಾಯದ ಹಿತಕ್ಕಾಗಿ ಈ ಖಾನೂನು ಮಾಡಲ್ಪಡುವದಾಗಿದ್ದರೆ ಜನರ ಪ್ರತಿನಿಧಿಗಳು ಇದಕ್ಕಿಂದಿಗೂ ವಿರೋಧಿಸುತ್ತಿರಲಿಲ್ಲ. 85 ಹಿಂದೀಯ ಚುನಾಯಿತ ಮೆಂಬರುಗಳಲ್ಲಿ 15 ಮಹನೀಯರು ವಿನಹ ಬಾಕಿಯವರೆಲ್ಲರೂ ಈ ಮಸೂದೆಗೆ ವಿರೋಧಿಸಿದ್ದರಿಂದ ಇದು ಜನಸಮುದಾಯಕ್ಕೆ ಬೇಕಾದ ಶಾಸನವಲ್ಲವೆಂಬುದು ವಿಶದವಾಯಿತು. ಸರ್ಕಾರಿ ಮೆಂಬರರು ಈಗ ಯಾವ ಕಾರಣಗಳನ್ನು ಮುಂದಿಟ್ಟರೂ 1932 ರಲ್ಲಿ ಈ ಆಕ್ಟನ್ನು ಮಾಡಿದ್ದು ಸತ್ಯಾಗ್ರಹ ಚಳವಳನ್ನು ಮುರಿಯಲಿಕ್ಕಾಗಿ ಎಂಬುದರಲ್ಲಿ ಸಂಶಯವಿಲ್ಲ. ಈಗ ಆ ಚಳವಳವು ಪೂರ್ತಿಯಾಗಿ ನಿಲ್ಲಿಸಲ್ಪಟ್ಟಿಲ್ಲವೆಂಬ ಸರ್ಕಾರಿ ಮೆಂಬರರ ವಾದದಲ್ಲಿ ಹುರುಳಿಲ್ಲ. ಜನರ ಜನ್ಮಹಕ್ಕಾದ ಭಾಷಣ, ಲೇಖನ ಸ್ವಾತಂತ್ರ್ಯಗಳಿಗೆ ಅಡಿ ತರುವ ಈ ಮಸೂದೆಯಂಥ ಶಾಸನಗಳನ್ನು ಜಾರಿಗೆ ತರುವುದರಿಂದಲೇ ಶಾಸನ ಭಂಗ ಚಳವಳವು ಪುನಹ ಪ್ರಾರಂಭವಾಗಲು ಅವಕಾಶವಾಗುವುದು. ಕ್ರಾಂತಿಕಾರರ ಚಳವಳವನ್ನಡಗಿಸಲಿಕ್ಕಾಗಿ ಈ ಆಕ್ಟನ್ನು ಈ ಮೊದಲು ಜಾರಿಗೆ ತಂದದಲ್ಲ. ಕ್ರಾಂತಿಯನ್ನು ನಿಲ್ಲಿಸಲು ಬಂಗಾಳ ಪ್ರಾಂತ್ಯದಲ್ಲಿ ಬೇಕಾದಷ್ಟು ಖಾನೂನುಗಳಿವೆ ಅಲ್ಲದೆ ಕ್ರಾಂತಿಯ ಮೂಲ ಕಾರಣಗಳಾದ ಬಡತನ, ನಿರುದ್ಯೋಗತನ ಮತ್ತು ಆಡಳಿತ ಕ್ರಮದಲ್ಲಿ ಜನರಿಗಿರುವ ಅತೃಪ್ತಿ ಇವುಗಳನ್ನು ಹೋಗಲಾಡಿಸುವುದೇ ಕ್ರಾಂತಿ ಚಳವಳವನ್ನು ನಿಲ್ಲಿಸಲು ಸುಲಭ ಉಪಾಯವಲ್ಲದೆ ಇಂಥಾ ಕಠಿಣ ತರದ ಕಾಯಿದೆಯನ್ನು ಎಲ್ಲಾ ಜನರ ಮೇಲೆ ಹೊರಿಸುವುದರಿಂದಲ್ಲ. 'ಕಮ್ಯೂನಿಸ್ಟ್' ಚಳವಳವನ್ನು ಅಡಗಿಸುವುದರ ವಿಷಯದಲ್ಲಿ ಸರ್ಕಾರಿ ಮೆಂಬರುಗಳ ಅಭಿಪ್ರಾಯಗಳೇ ಭಿನ್ನವಾಗಿವೆ. ಈ ಚಳವಳಿಯನ್ನು ಮೊಳಕೆಯಲ್ಲಿಯೇ ನಿರ್ಮೂಲ ಮಾಡಬೇಕೆಂದು ಒಬ್ಬರು ಹೇಳುವಾಗ್ಯೆ, ಆ ತರಹದ ಅಭಿಪ್ರಾಯ ಪ್ರಚಾರಕ್ಕೆ ಸರ್ಕಾರದವರು ಅಡ್ಡಿ ಮಾಡಲಾರರೆಂದು ಇನ್ನೊಬ್ಬ ಮೆಂಬರರು ಹೇಳಿದರು. ಆದುದರಿಂದ ಈ ಮಸೂದೆಯ ಉದ್ದೇಶವು ಕಮ್ಯೂನಿಸ್ಟ್ ಚಳವಳಿಯನ್ನು ನಿಲ್ಲಿಸುವುದಲ್ಲ. ಕೋಮುವಾರು ವಿದ್ವೇಷಗಳನ್ನು ಶಮನಪಡಿಸುವ ಕಾರಣವನ್ನೂ ಹೋಮ್ ಮೆಂಬರರು ಹೇಳಿದರು. ಆದರೆ ಈ ಕಾರಣವನ್ನು ಇತ್ತೀಚೆಗೆ ಸೇರಿಸಿಕೊಂಡದ್ದಾಗಿದೆ. ಅದನ್ನು ಅಡಗಿಸಲು ಈ ಶಾಸನದಿಂದ ಸಾಧ್ಯವೂ ಇಲ್ಲ ವೃತ್ತಪತ್ರಿಕೆಗಳಿಂದ ಕ್ರಾಂತಿಗೂ, ಕೋಮುವಾರು ದ್ವೇಷಗಳಿಗೂ ತುಂಬಾ ಉತ್ತೇಜನ ಸಿಕ್ಕುತ್ತಿದೆಯೆಂದು ಸರ್ಕಾರಿ ಮೆಂಬರರ ಹೇಳಿಕೆ. ಸ್ವಲ್ಪ ಮಂದಿ ಕ್ರಾಂತಿಕಾರರ ದೆಸೆಯಿಂದ ಇಡೀ ದೇಶದ ಮೇಲೆಯೇ ಈ ಶಾಸನವನ್ನು ಹೊರಿಸುವುದು ಎಂದೂ ನ್ಯಾಯವಲ್ಲ. ವ್ಯಾಪಾರ, ಉದ್ಯೋಗ, ಕೌನ್ಸಿಲು ಮೆಂಬರುತನ ಮುಂತಾದವುಗಳಿಗೆ ಸಂಬಂಧಪಟ್ಟ ಕೋಮುವಾರತ್ವವು ಯೂರೋಪಿಯನರಿಂದ ಪ್ರೋತ್ಸಾಹಿಸಲ್ಪಡುತ್ತಿರುವದಾಗಿದೆ. ಬೇರೆ ಕೋಮುವಾರು ಜಗಳಗಳು ಹೆಚ್ಚಾಗಿ ಬೀದಿಯ ಪೋಲಿ ಜನರಿಂದ ಉಂಟಾಗುವದಾಗಿದೆ. ಇವರ ಮೇಲೆ ಪತ್ರಿಕೆಗಳ ಬಲವೇನೂ ಇಲ್ಲ. ಆದುದರಿಂದ ಪತ್ರಿಕೆಗಳ ಮೇಲೆ ಅನಾವಶ್ಯವಾದ ನಿರ್ಬಂಧ ಇಡುವುದರಲ್ಲಿ ಅರ್ಥವಿಲ್ಲ. ಮುಂದೆ ಬರುವ ಹೊಸ ಸರ್ಕಾರಕ್ಕಾಗಿ ಈಗಿನ ಸರ್ಕಾರವು ಈ ತರಹದ ಶಾಸನಗಳನ್ನು ಮಾಡಿಡುವುದರಿಂದ ಮುಂದಿನ ಸರ್ಕಾರಕ್ಕೆ ಸಹಾಯ ಮಾಡುವುದರ ಬದಲು ಇದರಿಂದ ತುಂಬಾ ಅತೃಪ್ತಿಗೊಂಡ ದೇಶದ ಆಡಳಿತವನ್ನು ಅವರಿಗೆ ಬಿಟ್ಟು ಕೊಟ್ಟಂತಾಗುವುದು.

ಸರ್ಕಾರದವರ ಈ ಬಿಲ್ ಬಹುಮತದಿಂದ ಸೋಲಿಸಲ್ಪಟ್ಟಿತು. 61 ಮೆಂಬರರು ಇದಕ್ಕೆ ಪರವಾಗಿಯೂ, 71 ಮಂದಿ ಜನರ ಪ್ರತಿನಿಧಿಗಳು ವಿರೋಧವಾಗಿಯೂ ಓಟು ಕೊಟ್ಟರು. ವೈಸರಾಯರ ಸಿಫಾರಸ್ಸಿನೊಡನೆ ಈ ಮಸೂದೆಯು ತಾ. 16 ರಲ್ಲಿ ಪುನಹ ಎಸೆಂಬ್ಲಿಯ ಮುಂದಿಡಲಾಯಿತು. ಆಗಲೂ ಅದಕ್ಕೆ ಪರವಾಗಿ 57 ಓಟುಗಳೂ, ವಿರೋಧವಾಗಿ 69 ಓಟುಗಳೂ ದೊರೆತದ್ದರಿಂದ ಅದು ತಿರುಗಿ ಅಪಜಯ ಹೊಂದಿತು. ದೇಶದಲ್ಲಿ ರಾಷ್ಟ್ರೀಯ ಭಾವನೆಯನ್ನೇ ನಾಶಮಾಡಲು ಸಾಧನವಾದಂಥ ಈ ಬಿಲ್ಲನ್ನು ತಿರಸ್ಕಾರ ಮಾಡಿದ ಎಸೆಂಬ್ಲಿಯವರನ್ನು ಅಭಿನಂದಿಸಬೇಕಾಗಿದೆ

ಮುಸ್ಸೋಲಿನಿಗೆ ಯುದ್ಧ ಯಾತಕ್ಕಾಗಿ?

ಆರ್ಥಿಕ ಮುಗ್ಗಟ್ಟಿನ ಬಂಧನದಿಂದ ಪಾರಾಗಲಿಕ್ಕೆ.

ಮುಸ್ಸೋಲಿನಿಯವರು ಅಬಿಸೀನಿಯಾದೊಡನೆ ಯುದ್ಧ ಮಾಡವಿದ್ದರೆ, ಬೇರೆ ಯಾವದಾದರೊಂದು ರಾಷ್ಟ್ರದೊಡನೆ ಯುದ್ಧವನ್ನು ಹೂಡಲೇ ಬೇಕು. ಇಟೆಲಿಯಲ್ಲಿನ ಆರ್ಥಿಕ ಮುಗ್ಗಟ್ಟೇ ಇದಕ್ಕೆ ಕಾರಣ ಅಲ್ಲದೆ ಮುಸೋಲಿನಿಯವರ ಮನೋಗತಿಯೂ ಕಾರಣವೆನ್ನಲೂ ಬಹುದು. ಯಾತಕ್ಕೆಂದರೆ ಮುಸೋಲಿನಿಯವರು ರಾಜಕೀಯ ಪಟುವಲ್ಲ; ಆತನು ಸುಸಜ್ಜಿತನಾದ ಸಾಹಸಿ ಯೋದ್ಧ.

ಇಟೆಲಿಯಲ್ಲಿ ಇಂದು ಜಾರಿಯಲ್ಲಿರುವ 'ಫೇಸಿಸಮ್'' [illegible] ಲ್ಲ. ಈ ತತ್ವದ ಸೂತ್ರಧಾರಿಯಾದ ಮುಸೊಲಿನಿಯವರಂತೆ ಈ ತತ್ವವನ್ನು ಸಕಲ ಅಡಚಣೆಗಳ ಮಧ್ಯದಲ್ಲಿ ಸಾಹಸದಿಂದ ಮುಂದೊತ್ತುತಲಿರುವರಲ್ಲ. ಇಟೆಲಿಯ ಪಾಳುಬಿದ್ದಿರುವ ವಿಶಾಲ ಪ್ರದೇಶಗಳನ್ನು ವ್ಯವಸಾಯಕ್ಕನುಕೂಲವಾಗುವಂತೆ ಮಾಡುತ್ತಲಿರುವರು. ಇದೇನು ಸುಲಭದ ಕೆಲಸವೇ? ಈ ಕೆಲಸದಿಂದ ಇಟೆಲಿಯ ಭಂಡಾರವೆಲ್ಲಾ ಬರಿದಾಗಿದೆ. ಈ ಪ್ರಕಾರ ಎಷ್ಟೋ ಭೂಪ್ರದೇಶಗಳನ್ನು ರೂಪಿತಗೊಳಿಸಿದರೂ ಅವುಗಳಲ್ಲಿ ನ್ಯಾಯವಾದ ಕೃಷಿಗಳನ್ನು ಬೆಳೆಸಲು ಇನ್ನೂ ಹಣಬೇಕಾಗಿದೆ. ಇಟೆಲಿಯ ಇಂದಿನ ನೂತನ ರಾಜಕೀಯ ತತ್ವ ರಾಜ್ಯಭಾರದಿಂದ ಇಟೆಲಿಯ ದೇಹಶ್ರಮಿಗಳಿಗೆ (ಕೂಲಿಕಾರರಿಗೆ) ಹೆಚ್ಚಿನ ಸೌಲಭ್ಯಗಳೇನೂ ದೊರೆತಿಲ್ಲ. ಮುಸೋಲಿನಿಯವರು ಇವರಿಗೆ ರಾಷ್ಟ್ರೀಯ ಉನ್ನತಿಯ ಹುಚ್ಚು ಹಿಡಿಸಿರುವನು. ಅವರೆಲ್ಲರೂ ತಮ್ಮ ಕಷ್ಟಗಳಿಂದ ರಾಷ್ಟ್ರದ ಉನ್ನತಿಯಾಗುವದೆಂದು ನಂಬಿ ತಮ್ಮ ಹಿತವನ್ನೇ ಮರೆತಿರುವರು ಅಸಂಖ್ಯಾಕರಾಗಿರುವ ಈ ಬಡಪಾಯಿಗಳನ್ನು ಮುಕುಗೊಳಿಸಲು 'ದೇಶ ಭಕ್ತಿ', 'ರಾಷ್ಟ್ರೀಯತ್ವ' ಮೊದಲಾದ ಮಂತ್ರಗಳನ್ನು ಮುಸೋಲಿನಿಯವರು ಇವರ ಕಿವಿಯಲ್ಲಿ ಜಪಿಸುತ್ತಿರುವರು.

ಇಟೆಲಿಯ ರಾಜ್ಯಭಾರದಲ್ಲಿ ಹಣದ ಅಭಾವವು ಅವತರಿಸಿದ್ದಾದರೆ ಮುಸೋಲಿನಿಯವರ ಅವಸಾನವಾಗುವದೆಂದೇ ಹೇಳಬಹುದು ಶೀಘ್ರದಲ್ಲೇ ಇಟೆಲಿಯ ಖಜಾನೆಗಳು ಬರಿದಾಗಿಬಿಡುವವೆಂಬದನ್ನು ಅರಿತ ಮುಸೋಲಿನಿಯು ಹ್ಯಾಗಾದರೂ ತನ್ನ ಖಜಾನೆಯನ್ನು ತುಂಬುವ ಯೋಚನೆಯಲ್ಲಿ ಮಗ್ನರಾಗಿರುವರು. ಕೇವಲ ಸಾಮಾನ್ಯ ವರ್ಗದ ಕುಲದಿಂದ ಹುಟ್ಟಿ ಸೈನಿಕನಾಗಿಯೂ, ದೇಶಭ್ರಷ್ಟನಾಗಿಯೂ, ಕಮ್ಮಾರನಾಗಿದ್ದ ತನ್ನ ತಂದೆಯ ಪ್ರವೃತ್ತಿಯಲ್ಲಿ ಸಹಾಯಕನಾಗಿಯೂ, ಪತ್ರಿಕೋದ್ಯೋಗಿಯಾಗಿಯೂ ಹೆಚ್ಚು ಅನುಭವವನ್ನು ಪಡೆದಿರುವ ಈ ಧೂರ್ತನಿಗೆ ದೂರದೃಷ್ಟಿಯಿದ್ದೇ ಇರಬೇಕಲ್ಲವೇ, ಸಮಾಜದ ಪ್ರತಿಯೊಂದು ಮೆಟ್ಟಲಿನಲ್ಲೂ ಅನುಭವ ಪಡೆದ ಸಮಾಜವಾದಿಯು ಜನತೆಯ ದೃಷ್ಟಿಕೋನವನ್ನು ಚೆನ್ನಾಗಿ ಅರಿತಿರುವರು. ಜನಸಾಮಾನ್ಯರ ಮನೋಗತಿಯು ಯಾವ ಸಂದರ್ಭದಲ್ಲಿ ಹೇಗಾಗುವದೆಂಬದನ್ನು ತಿಳಿಯುವದರಲ್ಲಿ ಇವರ ಪಾಂಡಿತ್ಯಕ್ಕೆ ಮಿತಿಯೇ ಇಲ್ಲ. ಜನರಲ್ಲಿ ದೇಶಭಕ್ತಿ, ರಾಷ್ಟ್ರೀಯತ್ವಗಳನ್ನು ಅಂಕುರಿಸಿ, ಅವುಗಳಿಂದ ತನ್ನ ತತ್ವದ ಸಾಧನೆಯನ್ನು ಸಾಹಸಗಳಿಂದ ನಡೆಸುತ್ತಲಿರುವರು.

ಇಟೆಲಿಯವರಿಗೆ ನಾಟ್ಯದ ಅಭಿರುಚಿ ಹೆಚ್ಚು. ಅವರಿಗೆ ರಣಭೇರಿಗಳನ್ನು ಮೊಳಗಿಸಿ ಸೇನಾ ಕೌಶಲವನ್ನು ತೋರಿಸುವುದು, 'ಕಪ್ಪಂಗಿ' ಮೊದಲಾದ ಭಿನ್ನಾಭಿನ್ನ ಪೋಷಾಕಿನಲ್ಲಿ ಮೆರೆಯುವುದು ಮೊದಲಾದವುಗಳಲ್ಲಿ ಆಸಕ್ತಿ ಹೆಚ್ಚು. ಮುಸ್ಸೋಲಿನಿಯವರಿಗೆ ಬೇಕಾದದ್ದೂ ಇದೆ.

ಇಟೆಲಿಗೆ, ಈ ಆರ್ಥಿಕ ಮುಗ್ಗಟ್ಟಿನ ಹಸಿವಿನಲ್ಲಿ, ಇನ್ನೂ ಸ್ವತಂತ್ರದ ಪುಷ್ಕಳವಾದ ವಾತಾವರಣದಲ್ಲಿ ಸುಖ ಸಂಪತ್ತಿನಿಂದ ಸಂತೃಪ್ತಿಯಾಗಿರುವ ಅಬಿಸೀನಿಯಾದ ಮೇಲೆ ಕಣ್ಣು ಬಿದ್ದಿರುವುದರಲ್ಲಿ ಸೋಜಿಗವೇನು! ಇಟೆಲಿಯ ಜನಸಂಖ್ಯೆಯು ದಿನೇ ದಿನೇ ಹೆಚ್ಚುತ್ತಲಿದೆ. ಇವರಿಗೆ ಜೀವನಕ್ಕೆ ತಕ್ಕ ಹಾದಿಯನ್ನು ಸಂಪಡಿಸದಿದ್ದರೆ ಮುಸ್ಸೋಲಿನಿಯವರ ಅಧಿಕಾರಕ್ಕೆ ಉಳಿಗಾಲವಿಲ್ಲದಾಗುವದು. ಒಂದೋ ಅವರಿಗೆ ಜೀವನ ನಡೆಸಲು ಹೊಸ ರಂಗಸ್ಥಳಗಳನ್ನು ದೊರಕಿಸಿಕೊಡಬೇಕು. ಇಲ್ಲವೇ ಯುದ್ಧವನ್ನಾದರೂ ಹೂಡಿ, ಇಟೆಲಿಯು ಅಪಜಯ ಹೊಂದಿದರೂ ಚಿಂತೆಯಿಲ್ಲ, ಈ ಅಸಂಖ್ಯಾಕರಾಗಿರುವ ಇಟೆಲಿಯ ಜೀವಿಗಳ ಸಂಖ್ಯೆಯನ್ನು ಕಡಮೆಮಾಡಬೇಕು. ಈಗಿನ ನೂತನ ಯುದ್ಧ ವಿಧಾನದಲ್ಲಿ ಒಬ್ಬನೇ ಸಹಸ್ರ ಸೈನಿಕರನ್ನು ಧ್ವಂಸಗೊಳಿಸಬಲ್ಲನು. 'ದೇಶದ ಕೀರ್ತಿಗಾಗಿ ಸೇವೆಗಾಗಿ' ಮುಂತಾಗಿ ಹುರಿದುಂಬಿಸಿ ರಣಾಂಗಕಟ್ಟಿ ಅಲ್ಲಿ ಅವರು ಮಡಿದರೂ ಯಾ ಜಯಶಾಲಿಗಳಾದರೂ ಮುಸ್ಸೋಲಿನಿಯವರಿಗೆ ಪ್ರಯೋಜನವೇ. ಮಡಿದರೆ ಅಷ್ಟು ಜನ ಸಂಖ್ಯೆಯು ಕಡಿಮೆಯಾಯಿತು. ನಿರುದ್ಯೋಗದ ಬಾಧೆಯು ಕೊಂಚ ಸುಧಾರಿಸುವುದು. ಜಯಶಾಲಿಗಳಾದರೆ ಹೊಸ ರಾಜ್ಯಗಳು ದೊರಕುವವು ಹೆಚ್ಚಿರುವ ಜನಸಂಖ್ಯೆಯನ್ನು ಅಲ್ಲಿ ತುಂಬಿಸಬಹುದು. ಹಾಗೂ ಹೀಗೂ ಯುದ್ಧ ಬೇಕೇ ಬೇಕು.

ಮುಸ್ಸೋಲಿನಿಗೆ ಇಂಡಿಯಾದ ಮೇಲೂ ಕಣ್ಣೇ!

ಮುಸ್ಸೋಲಿನಿಯ ರಾಜ್ಯವಿಸ್ತರಣಾ ತೃಷೆಯು ಬರೇ ಅಬಿಸೀನಿಯಾವನ್ನು ಸ್ವಾಹ ಮಾಡುವುದರಲ್ಲಿ ಶಮನವಾಗುವುದಿಲ್ಲ. ಅಬಿಸೀನಿಯಾವನ್ನು ಆಕ್ರಮಿಸಿದ ನಂತರ (1) ಬ್ರಿಟಿಷರು ಅವರ ಮಾಲ್ಟಾ ಮತ್ತು ಸೈಪ್ರಸ್ ದ್ವೀಪಗಳನ್ನು ಬಿಟ್ಟುಕೊಡಬೇಕು, (2) ಬ್ರಿಟಿಷರು ಈಜಿಪ್ಟಿನ ಮೇಲಿಟ್ಟಿರುವ ಅಧಿಕಾರವನ್ನು ತೊರೆದು ಇಟೆಲಿಯ ಅಧಿಕಾರಕ್ಕೆ ಅವಕಾಶಕೊಡಬೇಕು, (3) ''ಬ್ಲೂನೈಲ್'' ನದಿಯ ನೀರಿನ ಹಕ್ಕನ್ನೂ ತೊರೆಯಬೇಕು ಎಂಬ ಮುಂತಾದ ಹವಣಿಕೆಯಲ್ಲಿರುವದೆಂದು ಬ್ರಿಟಿಷ್ ಮಂತ್ರಿ ಮಂಡಲಕ್ಕೆ ಎಚ್ಚರಿಕೆಗಳು ಬಂದಿವೆಯಂತೆ.

ಸರಿ, ಈ ಹವಣಿಕೆಗಳ ಉದ್ದೇಶವು ಭಾರತದ ವರೆಗೆ ಇಟೆಲಿಗೆ ಕಾಲುನೀಡಬೇಕೆಂಬದನ್ನು ವ್ಯಕ್ತಗೊಳಿಸಿದೆ. ಈಜಿಪ್ಟ್ ಮಾಲ್ಟಾ ಪ್ರದೇಶಗಳು ಕೈವಶವಾದರೆ ಹಿಂದೂದೇಶಕ್ಕೆ ಬರುವ ಹೆದ್ದಾರಿ ಕೈವಶವಾದಂತೆ. ಮುಸ್ಸೋಲಿನಿಯವರ ಈಗಿನ ಸನ್ನಾಹಗಳನ್ನೂ ಧೂರ್ತತೆಯನ್ನೂ ನೋಡಿದರೆ ಭಾರತದ ಮೇಲೂ ಅವರಿಗೆ ಕಣ್ಣಿದೆ ಎಂಬದು ವಿಶದವಾಗುತ್ತದೆ.

ವರ್ತಮಾನ ಸಂಗ್ರಹ.

ಒಳದೇಶ.

ಈ ವಾರ ಮಡಿಕೇರಿ ಚಾಕಿಯು ಬಳಿ ಒಬ್ಬ ಕೊಡವ ದರ್ಜಿಗೆ ಪ್ಲೇಗು ಅಂಟಿದೆಯೆಂದಾಗಿ ತಿಳಿಯುತ್ತೇವೆ.

ಚೀಫ್ ಕಮಿಷನರವರು ಈ ತಾ. 19 ನೇ ಗುರುವಾರ ಬೆಳಿಗ್ಗೆ ಮಡಿಕೇರಿಯಿಂದ ಬೆಂಗಳೂರಿಗೆ ಹೊರಟು ಹೋಗಿರುವರು.

ಕೊಡಗಿನ ನ್ಯಾಯವಿಧಾಯಕ ಸಭೆಯ ಮೀಟಿಂಗು ಬರುವ ಅಕ್ಟೋಬರು ತಿಂಗಳ ಆಖೈರಿನಲ್ಲಿ ನಡೆಯಬಹುದೆಂದು ಸುದ್ದಿ.

ಆದಿ ಕಾವೇರಿ ಬಸ್ಸ್ ಸರ್ವಿಸಿನವರಿಗೆ ಮಡಿಕೇರಿಯಿಂದ ಹುದಿಕೇರಿಯ ವರೆಗೆ ಸರ್ವಿಸು ನಡೆಸಲು ಲೈಸೆನ್ಸು ದೊರೆತಿರುವದಾಗಿ ತಿಳಿಯುತ್ತೇವೆ.

ಆರ್ಥಿಕ ವಿಚಾರಣಾ ಕಮಿಟಿಯವರು ಈ ತಾ. 17 ರಲ್ಲಿ ಮಡಿಕೇರಿಯಲ್ಲಿ ಸೇರಿ, ತಮ್ಮ ಕರಡು ವರದಿಯನ್ನು ಚರ್ಚಿಸಿದರಾಗಿ ತಿಳಿಯಬರುತ್ತದೆ.

ಕೊಡಗು ಟೆರಿಟೋರಿಯಲ್ ಪಟಾಲಾಮಿನಲ್ಲಿ ಸುಭೆದಾರರಾಗಿರುವ ಮೆ. ಮನೆಯಪಂಡ ಐಯ್ಯಪ್ಪನವರನ್ನು ಸುಭೆದಾರ್ ಮೇಜರಾಗಿ ನೇಮಕ ಮಾಡಿರುವರಾಗಿ ತಿಳಿಯಬಂದಿದೆ.

ಮ ರಾ. ಮಂಡೇಪಂಡ ಬೋಪಯ್ಯ ಎಲ್. ಯಂ ಪಿ. ಯವರು ಈ ತಾ. 14ರಲ್ಲಿ ಪೊನ್ನಂಪೇಟೆಯಲ್ಲಿ ಒಂದು ಖಾಸಗೀ ಔಷಧಾಲಯವನ್ನು ತೆರೆದಿರುವರಾಗಿ ತಿಳಿಯುತ್ತೇವೆ.

ಕೊಡಗಿನ ಕಾಫಿ ಪ್ಲಾಂಟರುಗಳಿಗೆ ಸಾಲದ ರೂಪದಲ್ಲಿ ಧನ ಸಹಾಯ ಮಾಡುವುದಕ್ಕಾಗಿ ಇಂಡಿಯ ಸರಕಾರದಿಂದ ಐದು ಲಕ್ಷ ರೂಪಾಯಿ ಸಾಲ ಕೇಳಲು ಸ್ಥಳೀಯ ಸರಕಾರದವರು ನಿಶ್ಚಯಿಸಿರುವರಾಗಿ ವರ್ತಮಾನವಿದೆ.

ಕೊಡಗಿನಲ್ಲಿ ಖಾಲಿ ಇರುವ ಎರಡು ಪೊಲೀಸು ಸಬ್ ಇನ್‌ಸ್ಪೆಕ್ಟರುಗಳ ಹುದ್ದೆಗೆ ಸುಮಾರು 45 ಅಪ್ಲಿಕೇಶನುಗಳು ಬಂದಿದ್ದವೆಂದೂ, ಅವುಗಳಲ್ಲಿ ಹನ್ನೊಂದನ್ನು ಹೆಕ್ಕಿ ತೆಗೆಯಲಾಗಿದೆಯೆಂದೂ, ಇವರ ಪೈಕಿ ಇಬ್ಬರನ್ನು ಈ ತಾ 23 ರಲ್ಲಿ ಆರಿಸಲಾಗುವದೆಂದೂ ವರ್ತಮಾನ.

ಈ ತಾ. 13 ರಿಂದ 19 ರ ವರೆಗೆ ಮಡಿಕೇರಿಯಲ್ಲಿ 4.48 ಇಂಚು ಮಳೆಯಾಗಿದೆ. ಕಳೆದ ಎರಡು ವಾರಗಳಲ್ಲಿ ಬಿದ್ದ ಜೋರಾದ ಮಳೆಯಿಂದ ಭತ್ತ ವ್ಯವಸಾಯಗಾರರಿಗೆ ಮುಖ್ಯವಾಗಿ ನಾಟಿ ಕೆಲಸ ಹಿಂದೆಯಾಗಿದ್ದ ರೈತರಿಗೆ ತುಂಬಾ ಪ್ರಯೋಜನ ಉಂಟಾಗಿದೆಯೆಂದು ತಿಳಿಯುತ್ತೇವೆ.

ವೀರಾಜಪೇಟೆಯಲ್ಲಿ ಈಗ ಬೋರ್ಡಿಂಗ' ಮನೆಯಾಗಿರುವ ಶ್ರೀ ರಾಮಕೃಷ್ಣ ಆಶ್ರಮದ ಕಟ್ಟಡದ ಫಂಡಿಗೆ ಪೊನ್ನಂಪೇಟೆನಾಡಿನ ಶ್ರೀಮತಿ ಮಚ್ಚಿಯಂಡ ಅಮ್ಮವ್ವನವರು ತಮ್ಮ ಪತಿ ಲೇಟ್ ಕಾಳಪ್ಪನವರ ಜ್ಞಾಪಕಾರ್ಥವಾಗಿ 1000 ರೂಪಾಯಿಗಳನ್ನು ಉಚಿತಾರ್ಥವಾಗಿ ಕೊಟ್ಟಿರುವರಾಗಿ ತಿಳಿಯುತ್ತೇವೆ.

ಅನ್‌ರಿಡೀಮ್ಡ್ ಜಾಗದ ಗಂಧದ ಮರಗಳಿಗೆ ಜೋಸನು ಕೊಡಲು ಮಾಡಿರುವ ಕರಡು ನಿಬಂಧನೆಗಳನ್ನು ನಿಷೇಧಿಸಲು ಈ ತಾ. 13 ರಲ್ಲಿ ಸೋಮವಾರಪೇಟೆಯಲ್ಲಿಯೂ, ತಾ. 16 ರಲ್ಲಿ ರಾಮಸ್ವಾಮಿ ಕಣಿವೆಯಲ್ಲಿಯೂ, ಜಮಾನ್ದಾರರ ಸಂಘದ ಆಶ್ರಯದಲ್ಲಿ ತಾ· 18 ರಲ್ಲಿ ವೀರಾಜಪೇಟೆಯಲ್ಲಿಯೂ ಸಾರ್ವಜನಿಕ ಸಭೆಗಳು ಸೇರಿದ್ದವು

'ಇಂಡಿಯನ್ ಮೋಟಾರ್ ವೆಹಿಕಲ್ಸ್' ಆಕ್ಟಿನ ಅಧಿಕಾರವನ್ನು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಿಂದ ಪೊಲೀಸು ಡಿಸ್ಟ್ರಿಕ್ಟ್ ಸುಪರಿಂಟೆಂಡರಿಗೆ ವರ್ಗಾಯಿಸುವ ಅಭಿಪ್ರಾಯ ಮಾಡಿರುವದರಿಂದ ಕೊಡಗು 'ಮೋಟಾರ್ ವೆಹಿಕಲ್ಸ್ ಟೆಕ್ಸೇಶನ್ ಆಕ್ಟಿನ' ಅಧಿಕಾರವನ್ನೂ ಅದೇ ಆಫೀಸರಿಗೆ ವರ್ಗಾಯಿಸುವುದಕ್ಕಾಗಿ ಒಂದು ಮಸೂದೆಯು ಕೌನ್ಸಿಲಿನ ಮುಂದೆ ತರಲ್ಪಡುವುದು

ವಿದ್ಯುಚ್ಛಕ್ತಿ, ಗ್ರಾಮಾಂತರ ರಸ್ತೆ, ನೀರು ಸರಬರಾಯಿ ಮತ್ತು ಆಸ್ಪತ್ರೆಗಳಿಗೆ ಹೆಚ್ಚಿನ ಗ್ರಾಂಟು ಕೊಡಬೇಕೆಂದು ಕೇಳಲು ಡಿಸ್ಟ್ರಿಕ್ಟ್ ಬೋರ್ಡಿನವರ ಡೆಪ್ಯುಟೇಶನೊಂದು ಈ ತಾ. 18 ರಲ್ಲಿ ಮಡಿಕೇರಿಯಲ್ಲಿ ಚೀಫ್ ಕಮಿಷನರವರಲ್ಲಿಗೆ ಹೋಗಿದ್ದರೆಂದೂ, ಸಹಾನುಭೂತಿಯಿಂದ ಆಲೋಚಿಸಲಾಗುವದೆಂದು ಚೀಫ್ ಕಮಿಷನರವರು ಜವಾಬು ಕೊಟ್ಟರೆಂದೂ ತಿಳಿಯುತ್ತೇವೆ.

ಕೊಡಗಿನಲ್ಲಿ ಜೇನು ನೊಣಗಳನ್ನು ಸಾಕಿ ಜೇನು ಸಂಗ್ರಹಿಸುವ ಕಾಮಗಾರಿಕೆಗಾಗಿ ಪೊನ್ನಂಪೇಟೆ ಶಾರದಾಶ್ರಮದ ಶಂಭಾನಂದ ಸ್ವಾಮಿಯವರಿಗೆ ಪರದೇಶದವರೊಬ್ಬರು 100 ರೂಪಾಯಿಗಳನ್ನು, ಕೊಡವರೊಬ್ಬರು 100 ರೂಪಾಯಿಗಳನ್ನು ಉಚಿತಾರ್ಥವಾಗಿ ಕೊಟ್ಟಿರುವರೆಂದೂ, ಆ ಕಾಮಗಾರಿಕೆಗೆ ಬೇಕಾದ ಸಾಮಾನುಗಳನ್ನು ತರಿಸುವ ಏರ್ಪಾಡಾಗಿದೆಯೆಂದೂ ತಿಳಿಯಬರುತ್ತದೆ.

ಈ ತಾ. 28 ನೇ ಶನಿವಾರ ನಡೆಯಲಿಕ್ಕಿರುವ ವೀರಾಜಪೇಟೆ ಮುನ್ಸಿಪಲ್ ಕಮಿಟಿಯ ಚುನಾವಣೆಗೆ ಕ್ರಿಶ್ಚಿಯನರ ಪರ 2 ಸ್ಥಳಗಳಿಗೆ ರೆವೆರೆಂಡ್ ಫಾದರ್ ಡಿಸೋಜ ಮತ್ತು ಮೆ. ಗೇಬ್ರಿಯಲ್ ಪಾಸರವರೂ, ಕೊಡಗೆ ತರ ಹಿಂದೂಗಳ ಪರ 4 ಸ್ಥಳಗಳಿಗೆ ಮೆ. ಗಳಾದ 1. ಟಿ. ಆರ್. ತಿರುವೆಂಗಡಪಿಳ್ಳೆ, 2. ಆರ್. ಯಸ್. ಸಂಜೀವರಾವ್, 3. ಯಸ್. ಯಸ್. ರಾಮಮೂರ್ತಿ, 4 ಜೆ. ಯಸ್. ನೆಮಿರಾಜಯ್ಯ, 5. ಹೆಚ್ ಟಿ. ಪ್ರಸನ್ನ ಮತ್ತು 6 ಎ ಯಸ್. ರಾಮಯ್ಯನವರೂ, ಕೊಡಗರ ಪರ 2 ಸ್ಥಳಗಳಿಗೆ ಮೆ. ಗಳಾದ 1 ಪಾಲೇಕಂಡ ತಮ್ಮಯ್ಯ, 2 ಪಳೆಯಂಡ ಕುಶಾಲಪ್ಪ ಮತ್ತು 3. ಚೀಯಕಪೂವಂಡ ಭೀಮಯ್ಯನವರೂ, ಮಹ್ಮದೀಯರ ಪರ 3 ಸ್ಥಳಗಳಿಗೆ ಮೆ. ಗಳಾದ 1. ಖಾಜಿ ಮಹ್ಮದ್ ಇಸೂಫ್ ಸಾಹೇಬ್, 2. ಬಿ ಅಬ್ದುಲ್ ಕಾದಿರ್ ಸಾಹೇಬ್, 3. ಸಿ. ಮಹ್ಮದ್ ಇಸ್ಮಾಯಿಲ್ ಸಾಹೇಬ್, 4 ಕಂಡೋತ್ ಅಮ್ಮುಕಾಕ, 5. ಬಿ ಕೆ. ಹಬಿಬುಲ್ಲಾ ಖಾನ್ ಬ್ಯಾರಿ ಮತ್ತು 6 ಡಿ. ಹೆಚ್. ಅಬ್ದುಲ್ ರಹಮಾನ್ ಸಾಹೇಬ್‌ರವರೂ ಉಮೇದುವಾರರಾಗಿ ನಿಂತಿರುವರು.

ಈ ತಾ 17 ರಲ್ಲಿ ಮಡಿಕೇರಿಯಲ್ಲಿ ಹೊರಟಿರುವ 'ಉದಯ' ಮತ್ತು 'ಡಾನ್' ಎಂಬ ಕನ್ನಡ ಮತ್ತು ಇಂಗ್ಲಿಷು ಮಿಶ್ರಿತವಾದ ವಾರ ಪತ್ರಿಕೆಯ ಪ್ರಥಮ ಸಂಚಿಕೆಯನ್ನು ವಂದನಾಪೂರ್ವಕ ಸ್ವೀಕರಿಸಿರುತ್ತೇವೆ

ಹಿಂದೂದೇಶ.

ಕಳೆದ ರಾಯಲ್ ಸಿಲ್ವರ್ ಜುಬಿಲಿ ಫಂಡಿಗೆ ಒಟ್ಟು 133 ಲಕ್ಷ ರೂ. ಗಳು ಶೇಖರಿಸಲ್ಪಟ್ಟಿವೆಯೆಂದು ಪ್ರಕಟವಾಗಿದೆ.

ಈ ತಾ. 16 ರಲ್ಲಿ ವೈಸರಾಯರು ಎಸೆಂಬ್ಲಿಯಲ್ಲಿ ಭಾಷಣ ಮಾಡಿದಾಗ್ಯೆ ಕಾಂಗ್ರೆಸು ಮೆಂಬರುಗಳ್ಯಾರೂ ಸಭೆಯಲ್ಲಿರಲಿಲ್ಲ.

ಪ್ರೆಸ್ಸ್ ಆರ್ಡಿನೆನ್ಸ್ (1929) ಮತ್ತು ಪ್ರೆಸ್ಸ್ ಎಮರ್ಜೆನ್ಸಿ ಆಕ್ಟ್ (1931) ಇವೆರಡು ನಿಬಂಧನೆಗಳಂತೆ ಒಟ್ಟಿಗೆ 166 ವಾರ್ತಾ ಪತ್ರಿಕೆಗಳು 2,52,851 ರೂ ಗಳನ್ನು ಸರಕಾರಕ್ಕೆ ಸೆಕ್ಯೂರಿಟಿಯಾಗಿ ಕೊಟ್ಟಿವೆ.

ಎಸೆಂಬ್ಲಿಯವರಿಂದ ಎರಡು ಸಾರಿ ತಿರಸ್ಕರಿಸಲ್ಪಟ್ಟ 'ಕ್ರಿಮಿನಲ್ ಲಾ ಎಮೆಂಡ್‌ಮೆಂಟ್ ಬಿಲ್ಲ'ನ್ನು ವೈಸರಾಯರು ಸರ್ಟಿಫೈ ಮಾಡಿ, ಅದನ್ನು ಪಾಸು ಮಾಡಬೇಕೆಂದು ಹೇಳಿ ಕೌನ್ಸಿಲ್ ಆಫ್ ಸ್ಟೇಟಿಗೆ ಕಳುಹಿಸಿರುವರು

ಇಂದೂರು ಮಹಾರಾಜರು ತಮ್ಮ ಸಂಸ್ಥಾನದ ನ್ಯಾಯವಿಧಾಯಕ ಸಭೆಯ ಮೆಂಬರುಗಳ ಸಂಖ್ಯೆಯನ್ನು 30ಕ್ಕೇರಿಸಿ, ಆ ಸಭೆಗೆ ಹೆಚ್ಚಿನ ಅಧಿಕಾರವನ್ನು ತಮ್ಮ 28ನೇ ವರ್ಧಂತಿಯುತ್ಸವದ ಕಾಲದಲ್ಲಿ ದಯಪಾಲಿಸಿರುವರು.

ಅಲ್ಲಹಾಬಾದಿನ ಒಂದು ಪೊಲೀಸ್ ಸ್ಟೇಶನಿನ ಎದುರಿಗೆ ಬಿದ್ದಿದ್ದ ಒಂದು ತವರದ ಪೆಟ್ಟಿಗೆಯನ್ನು ಒಬ್ಬ ಕಾನ್ಸ್‌ಟೇಬಲನು ಎತ್ತಿಕೊಂಡ ಕೂಡಲೇ ಅದರೊಳಗಿದ್ದ ಒಂದು ಬಾಂಬು ಸಿಡಿದು ಆತನಿಗೆ ಗಾಯಗಳಾಗಿವೆ.

ಶ್ರೀಮತಿ ಸರೋಜಿನಿ ನಾಯಡುರವರು ಹಾಸಿಗೆ ಹಿಡಿದಿದ್ದು ವಿಶ್ರಾಂತಿ ಅಗತ್ಯವೆಂದು ಡಾಕ್ಟರು ಅಭಿಪ್ರಾಯಪಟ್ಟಿರುವರು. ಆದಕಾರಣ ಅವರು ಸಿಮ್ಲಾದ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನ ಮೀಟಿಂಗಿಗೆ ಹೋಗಲಾರರು.

ಬರುವ ಡಿಸೆಂಬರ್ ತಾ. 15ರಿಂದ 1 ತಿಂಗಳ ವರೆಗೆ ಮದ್ರಾಸಿನಲ್ಲಿ ಸಮಗ್ರ ಭಾರತದ ಖಾದಿ ಮತ್ತು ಇದರ ಸ್ವದೇಶಿ ಸಾಮಗ್ರಿಗಳ ಒಂದು ವಸ್ತು ಪ್ರದರ್ಶನವನ್ನು ಜರುಗಿಸಬೇಕೆಂದು ತಮಿಳುನಾಡು ಕಾಂಗ್ರೆಸ್ ಕಮಿಟಿಯು ನಿರ್ಧರಿಸಿದೆ

ಗಣೇಶ ಶಂಕರ ವಿದ್ಯಾರ್ಥಿಗಳವರ ಸ್ಮಾರಕನಿಧಿಗಾಗಿ ಒಂದು ಲಕ್ಷ ರೂ. ಗಳನ್ನು ಸಂಗ್ರಹಿಸಿ ತನ್ಮೂಲಕ ಪ್ರತಾಪ ಪತ್ರಿಕೆಗೆ ಆಶ್ರಯವನ್ನು ಕೊಡಬೇಕೆಂದು ಕಾನ್ಪುರದಲ್ಲಿ ಡಾ. ಮುರಾರಿ ಲಾಲರವರ ಅಧ್ಯಕ್ಷತೆಯಲ್ಲಿ ಜರುಗಿದ ಮಹಾಸಭೆಯಲ್ಲಿ ಸೂಚನೆಗಳು ಬಂದಿವೆ

ವಿದೇಶ.

ಪ್ರಪಂಚದ ದೊಡ್ಡ ಪಟ್ಟಣವು ಲಂಡನ್ ಅಲ್ಲ, ನ್ಯೂಯಾರ್ಕ್ ಅಲ್ಲ, ಹಂಗೇರಿಯದ ಡಿಬ್ರಿಸೆನ್ ಇದರ ವಿಸ್ತಾರವು 600 ಚದರ ಮೈಲಿಗೂ ಹೆಚ್ಚು.

ಹಿಂದೀ ಟಾರಿಫ್ ಬೋರ್ಡಿನ್ನವರಿಗೆ ಲಂಕಾಶಹರಿನ ಅಂಶಿಯ ವಿಜ್ಞಾಪನೆಗಳನ್ನು ವಿವರಿಸಲು ಲಂಕಾಶಹರಿನಿಂದ ಒಂದು ಡೆಲಿಗೇಶನ್ ಕಳುಹಿಸಲ್ಪಡುವದೆಂದು ಪ್ರಕಟವಾಗಿದೆ.

ಹಂಗೇರಿಯದ ವಿದ್ವಾಂಸನೊಬ್ಬನು ಅತ್ಯಂತ ಸಣ್ಣದಾದ ಒಂದು ವಿದ್ಯುಚ್ಛಕ್ತಿಯ ಯಂತ್ರವನ್ನು 4 ತಿಂಗಳಲ್ಲಿ ಕಂಡು ಹಿಡಿದಿರುವನು ಆ ಯಂತ್ರದ ಡೈನಮೊ ಒಂದು ಸೊನ್ನೆಯಷ್ಟಿದೆಯಂತೆ!

10 ಸಾವಿರ ಅಡಿಗಳ ಎತ್ತರದಲ್ಲಿ ಗಂಟೆಗೆ 100 ಮೈಲಿಗಳ ವೇಗದಲ್ಲಿ ವಾಯುಮಂಡಲದಲ್ಲಿಯೇ ವಿಮಾನಗಳು ಸಂಚರಿಸುವ ಬಗೆಗೊಂದು ಒಂದು ರೇಡಿಯೋ ಸೆಟ್ಟು ವಿಲಾಯತಿಯಲ್ಲೀಗ ಸಿದ್ಧವಾಗಿದೆ. ಈ ರೇಡಿಯೋವನ್ನು ಭೂಮಿಯಲ್ಲಿಟ್ಟು ತಿರುಗಿಸಿದರೆ ಸಾಕು; ವಿಮಾನವು ತನ್ನಂತೆ ಮೇಲೇರಿ ಸಂಚರಿಸಿ ಕೆಳಗಿಳಿಯುವುದು.

ಇಟಲಿ-ಅಬಿಸೀನಿಯಾ ಯುದ್ಧ ಪ್ರಾರಂಭವೋ?

ಇಟಲಿ-ಅಬಿಸೀನಿಯಾ ಸಮಸ್ಯೆಯನ್ನು ತೀರ್ಮಾನಿಸಲು ನೇಮಿಸಲ್ಪಟ್ಟ 5 ಮೆಂಬರುಗಳ ಕಮಿಟಿಯು ವರದಿ ತಯಾರಾಗಿದೆ. ಇದು ತಾ. 18ರಲ್ಲಿ ಪ್ರಕಟವಾಗಲಿಕ್ಕಿತ್ತು.

'ಇಟಲಿಯು ಇಷ್ಟರ ವರೆಗೆ ಪೂರ್ವ ಆಫ್ರಿಕಾದಲ್ಲಿ ತಯಾರಿಗಾಗಿ ಮಾಡಿರುವ 2 ಸಾವಿರ ಮಿಲ್ಲಿಯ ಲಿಯರುಗಳು ತಮಾಷೆಗಲ್ಲ. ಇಟಲಿಯು ಮುಂದುವರಿಯುವುದು. ಅದನ್ನು ತಡೆಯಲು ಈಗ ತಡವಾಯಿತು. ಯುದ್ಧವಾದರೆ ಅದಕ್ಕೆ ಅಬಿಸೀನಿಯಾ ಮತ್ತು ಜನಾಂಗಗಳ ಕೂಟವು ಜವಾಬ್ದಾರರು' ಎಂದು ಮುಸ್ಸೋಲಿನಿಯವರ ಹೇಳಿಕೆ.

ಜಿಬ್ರಾಲ್ಟರ್ ಬಂದರಿಗಾಗಿ ಹಡಗುಗಳ ಪ್ರಯಾಣಕ್ಕೆ ಅಡ್ಡಿ ಮಾಡಲ್ಪಟ್ಟಿದೆ.

ಇಟಲಿ ಹಡಗುಗಳು ಸೈನಿಕರನ್ನು ಆಫ್ರಿಕಾಕ್ಕೆ ಒಯ್ಯುತ್ತಿರುವವು. ಮಾಲ್ಟಾದಿಂದ ನೂರಾರು ಇಂಗ್ಲಿಷ್ ಸ್ತ್ರೀಯರೂ, ಮಕ್ಕಳೂ ಇಂಗ್ಲೆಂಡಿಗೆ ವಾಪಸು ಹೋಗುತ್ತಲಿರುವರು

ಅಬಿಸೀನಿಯಾದಲ್ಲಿ ಸೈನಿಕರೆಲ್ಲರೂ ಯುದ್ಧಕ್ಕೆ ತಯಾರಾಗಬೇಕಾದ ಮತ್ತು ದಂಡು ಖಾನೂನು ಜಾರಿಗೆ ತರ ಹುಕುಂ ತಯಾರು ಮಾಡಲ್ಪಟ್ಟಿದೆ. ಇಟಲಿಯು ಲೀಗ್ ಕಮಿಟಿಯ ಸಿಫಾರಸ್ಸುಗಳನ್ನು ತಿರಸ್ಕರಿಸಿ, ಲೀಗ್ ಕೂಟವನ್ನು ಬಿಟ್ಟ ಕೂಡಲೇ ಅಬಿಸೀನಿಯಾದ ಚಕ್ರವರ್ತಿಯವರು ಈ ಹುಕುಮಿಗೆ ರುಜು ಮಾಡುವರಂತೆ.

ಇಟಲಿ ಸೋಮಾಲಿಲ್ಯಾಂಡಿನ ಗಡಿಯಲ್ಲಿ ಒಂದು ನೂರು ಸಾವಿರ ಅಬಿಸೀನಿಯಾ ಸೈನ್ಯಗಳು ಸುಸಜ್ಜಿತವಾಗಿವೆಯೆಂದು ವರ್ತಮಾನ

ಇಟಲಿ-ಅಬಿಸೀನಿಯಾ ಸರಹದ್ದಿನಲ್ಲಿ ಯುದ್ಧವು ಪ್ರಾರಂಭವಾಗಿದೆಯೆಂಬ ಸುದ್ದಿಯು ಜಿನೇವಾದಲ್ಲಿ ಹರಡಿದೆಯೆಂದು ಜಪಾನಿನಿಂದ ವಾರ್ತೆ ಬಂತೆಂತಲೂ, ರೋಮ್, ಲಂಡನ್ ಮತ್ತು ಜಿನೇವಾದಲ್ಲಿ ಅಧಿಕಾರಿಗಳನ್ನು ವಿಚಾರಿಸಿದಾಗ್ಯೆ ಇದು ನಿಜವಲ್ಲವೆಂತಲೂ ಪ್ರಕಟವಾಗಿದೆ,

---

ವಂದನೆಗಳು.

ನನ್ನ ಪ್ರಿಯ ತಂದೆಯವರ ಮರಣದಿಂದ ನನಗುಂಟಾಗಿರುವ ವ್ಯಸನದಲ್ಲಿ ಭಾಗಿಗಳಾಗಿ ಸಂತಾಪಗಳನ್ನು ಸೂಚಿಸಿ ಬರೆದಿರುವ ನನ್ನ ಅನೇಕ ಬಂಧು ಮಿತ್ರರ ಪತ್ರಗಳು ಹಸ್ತಗತವಾಗಿವೆ. ಪ್ರತಿಯೊಬ್ಬರಿಗೂ ನನ್ನ ವಂದನೆಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಪತ್ರದ್ವಾರ ಅರ್ಪಿಸಲು ನನಗೆ ಸಾಧ್ಯವಿಲ್ಲದ್ದರಿಂದ ಈ ಪತ್ರಿಕೆಯ ಮೂಲಕ ನನ್ನ ಇಷ್ಟ ಬಂಧುಗಳಿಗೆ ನನ್ನ ಮನಃಪೂರ್ವಕ ವಂದನೆಗಳನ್ನು ಅರ್ಪಿಸುವದಾಗಿದೆ. ನನ್ನ ವ್ಯಸನದಲ್ಲಿ ಆ ಪತ್ರಗಳು ಎಷ್ಟರ ಮಟ್ಟಿಗೆ ಚಿತ್ತಶಾಂತಿಯನ್ನುಂಟುಮಾಡಿದೆಂಬದನ್ನು ನಾನು ಬರೆದು ವಿವರಿಸಲಾರೆ. ಅವರ ಈ ಸಹಾನುಭೂತಿಗೆ ನಾನು ಚಿರಋಣಿಯಾಗಿರುವೆನು.

ಚೆಪ್ಪುಡಿರ ಕೆ. ಬೋಪಯ್ಯ.
ಸುಪರಿಂಟೆಂಡೆಂಟ್,
ಮುತ್ತುರಾಡ್ ಡಿವಿಜನ್,
ಕಾಟೇರಿ ಎಸ್ಟೇಟ್ಸ್ ಲಿಮಿಟೆಡ್,
ನೀಲಗಿರಿ.

ನೋಟೀಸು.

ಕೊಡಗು ಸಬಾರ್ಡಿನೇಟ್ ಜಡ್ಜಿಯವರ ಕೋರ್ಟಿನಲ್ಲಿ
1935ನೇ ಓ. ಎಸ್. ನಂಬರು 75.

ವಾದಿ—ಚೆನಿವಾರ ಬಸಪ್ಪನವರು, ಕೊಡ್ಲಿಪೇಟೆ.

VS.

ಪ್ರತಿವಾದಿಯರು—(1) ವೈಶ್ಯರ ಸೂರ್ಯನಾರಾಯಣ ಶೆಟ್ಟಿ,
(2) ಬೇಳೂರು ಚೆನ್ನಬಸಪ್ಪನವರು.

ಮೇಲ್ಕಂಡ ನಂಬರು ಮೊಕದ್ದಮ್ಮೆದ ವಾದಿಯು ಬೇಳೂರು ನಂಜೇಗೌಡ್ರ ಮಗ ಚೆನ್ನಬಸಪ್ಪನವರಿಂದ ಬರಬೇಕಾದ ಸಾಲ ವಸೂಲಾತಿಗೆ 1ನೇ ಪ್ರತಿವಾದಿ ವೈಶ್ಯರ ಲಿಂಗಣ್ಣ ಶೆಟ್ಟಿ ಮಗ ಸೂರ್ಯನಾರಾಯಣ ಶೆಟ್ಟಿಯು, 2ನೇ ಪ್ರತಿವಾದಿ ಬೇಳೂರು ಚೆನ್ನಬಸಪ್ಪನವರು ಒಂದಾಗಿಕೊಂಡು 2ನೇ ಪ್ರತಿವಾದಿಯ ಬಾಬ್ತು ಎಲ್ಲಾ ಕಾಫಿ ತೋಟದ ಫಸಲುಗಳನ್ನು ತಾ. 29—6—1933ರಿಂದ ಈ ವರೆಗೆ ಪ್ರತಿ ವರ್ಷ ಫಸಲು ಕ್ರಯ ಮತ್ತು ಗಿರ್ವಿ ವಗೈರೆ ಬರೆಸುತ್ತಾ ಬರುವದರಿಂದ ಬೇರೆ ಜನರ ಸಾಲ ವಸೂಲಾತಿಗೆ ತಡೆಯಾಗುತ್ತದಾಗಿ ದಾವ ದಾಖಲ್ ಮಾಡಿರುತ್ತಾನೆ. ಈ ರೀತಿ 1ನೇ ಪ್ರತಿವಾದಿಯು ಪ್ರತಿ ವರ್ಷ ಕಾಫಿ ಫಸಲು ಬರಸಿಕೊಳ್ಳುವದರಿಂದ 2ನೇ ಪ್ರತಿವಾದಿಯಿಂದ ಸಾಲ ವಸೂಲಾತಿಗೆ ಮೋಸವಾಗುತ್ತಿದೆಯಾಗಿ ಹೇಳತಕ್ಕವರೆಲ್ಲರೂ ಈ ಕೋರ್ಟಿಗೆ ತಾರೀಕು 1—10—1935ರೊಳಗೆ ತಮ್ಮ ಇರಾದೆಯನ್ನು ಖುದ್ದಾಗಿಯಾಗಲೀ ಯಾ ಲಾಯರ ಮೂಲಕವಾಗಲೀ ಸ್ಟೇಟ್‌ಮೆಂಟ್ ಮುಖಾಂತರ ತಮಗಳ ಇರಾದೆಯನ್ನು ತಿಳಿಸತಕ್ಕದ್ದು.

ಹೆಚ್. ತಿರುಮಲಾಚಾರ್,
(ಸಬ್-ಜಡ್ಜರು)

ವೈಸರಾಯರ ಕ್ವೆಟ್ಟಾ ಭೂಕಂಪ ಫಂಡಿಗೆ

ಹಣ ಸಹಾಯ ಮಾಡಿದ ಮಹನೀಯರು.

(ಕೊಡಗು ಕಮಿಷನರವರ ಆಫೀಸಿನಿಂದ)

ಹಿಂದಿನ ವಸೂಲಿ	3168	14	10
ಫ್ರೇಜರ್‌ಪೇಟೆ ಪಾರುಪತ್ಯಗಾರರ ವಸೂಲಿ	5	0	0
ಭಾಗಮಂಡ್ಲ ಪಾರುಪತ್ಯಗಾರರ ವಸೂಲಿ	1	6	0
ಡಿ. ಶಾಲಾ ಇನ್ಸ್‌ಪೆಕ್ಟರವರ ಮೂಲಕ	10	15	0
ಜುಮ್ಲಾ	3186	3	10

ಪ್ರಕಟಣೆ.

ಕೊಡಗಿನ ಕೆಲವು ಸ್ಥಳಗಳ ದೇವಸ್ಥಾನಗಳಲ್ಲಿ ಪರಸಿನಕಡವು ಮದಪ್ಪುರ ದೇವಸ್ಥಾನದ ಪರವಾಗಿ ಭಕ್ತ ಮಹಾಜನಗಳಿಂದ ಹರಕೆ ಮತ್ತು ಕಾಣಿಕೆ ಮೊದಲಾದವುಗಳನ್ನು ಸ್ವೀಕರಿಸುತ್ತಿರುವರಾಗಿ ತಿಳಿಯಬಂದಿದೆ. ಆದ್ದರಿಂದ ಮಲಯಾಳದಲ್ಲಿರುವ ಪರಸಿನಕಡವು ಮದಪ್ಪುರ ದೇವಸ್ಥಾನದ ಯಾವ ಕಾಣಿಕೆಯೂ ಹರಕೆಗಳನ್ನು ಈ ದೇವಸ್ಥಾನಗಳಲ್ಲಿ ಕೊಡಬಾರದಾಗಿ ಕೊಡಗಿನ ಭಕ್ತಾದಿಗಳಲ್ಲಿ ವಿನಂತಿ. ಪರಸಿನಕಡವು ದೇವಸ್ಥಾನದಿಂದ ಈ ಕಾಣಿಕೆಗಳನ್ನು ಸ್ವೀಕರಿಸಲು ಕೊಡಗಿನಲ್ಲಿ ಯಾರನ್ನೂ ನೇಮಿಸಿರುವದಿಲ್ಲ. ಆದಪ್ರಯುಕ್ತ ಮೇಲ್ಕಂಡ ದೇವಸ್ಥಾನಕ್ಕೆ ಇರುವ ಸಕಲ ಕಾಣಿಕೆ ಮತ್ತು ಹರಕೆಗಳನ್ನು ಈ ಕೆಳಗಿನ ವಿಳಾಸದಾರರಿಗೇನೇ ಕಳುಹಿಸಬೇಕಲ್ಲದೆ ಈ ವಿಚಾರವನ್ನು ಸಕಲ ಭಕ್ತಾದಿ ಜನಗಳಲ್ಲಿ ಪ್ರಚಾರ ಮಾಡಬೇಕೆಂದು ಅತಿ ವಿನಯದಿಂದ ಕೋರುವ,

ಪಿ. ಯಂ. ಕಂಞರಾಮನ್
ಪರಸಿನಕಡವು. [26—15] ಮೇನೇಜರ್,
25—5—'35. ಪರಸಿನಕಡವು ಮದಪ್ಪುರ ದೇವಸ್ಥಾನ.

Wanted.

Candidates for Telegraph and Station Master class. Allowance Rs 28. Uniform passage and quarter free. Service essential. Rules and Entrance form on annas eight.

Director,
Royal Telegraph and Rly.
Duties College,
12—3 Bombay No. 20.

೪೦ ವರ್ಷಗಳಿಂದ ಅನುಭವಪಟು ಪ್ರಖ್ಯಾತಿ ಹೊಂದಿದ

ಕರ್ಕಿ ಕಂಪನಿಯ

ಜ್ವರದ ಗುಳಿಗೆಗಳು.

ಚಳಿಜ್ವರ, ಚಾತುರ್ಥ ಜ್ವರ, ದಿನಬಿಟ್ಟು ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮ ಬಾಣದಂತೆ ಇವೆ. ಬಾಟ್ಲಿಗೆ ರೂ. ೧. ಟ. ಖ. ೭ ಆಣೆ. ಜರೂರು ತರಿಸಿಕೊಳ್ಳಿ.

ಗಣೇಶ ರಾಮಚಂದ್ರ ಕರ್ಕಿ,
(52—1) ಮತ್ತು ಕಂಪನಿ,
ಗಿರಗಾಂವ, ಮುಂಬಯಿ.

SHIROMANI NARAYANACHARYA

Choukhamba Benares City.

ಶಾಸ್ತ್ರಿಗಳೇ, ಪೂರ್ವಿಕರು ಆರೋಗ್ಯರೇ, ಅಥವ ಈಗಿನವರೇ? ರಾಮಣ್ಣಯ್ಯನವರೇ. ಪೂರ್ವಿಕರ ಆರೋಗ್ಯವೇ ನಿಜವಾದ ಆರೋಗ್ಯ. ಅದಕ್ಕೆ ಕಾರಣವೇನು? ಅವರು ರುದ್ರಾಕ್ಷಿಯನ್ನು ಬಿಡದೆ ಯಾವಾಗಲೂ ಧಾರಣೆಮಾಡುತ್ತ ಇದ್ದರು. ಅದರಿಂದ ಏನು ಫಲ? ಅದನ್ನು ಧರಿಸಿದರೆ ಜೀರ್ಣಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ಧೈರ್ಯವೃದ್ಧಿ ಸಂಪತ್ತು, ಕೀರ್ತಿ ಇವುಗಳೆಲ್ಲಾ ಆಗುವವು. ಹಾಗಾದರೆ ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವದು? ಅದು ಲೋಕಪ್ರಸಿದ್ಧಿ ಹೊಂದಿದ ನಮ್ಮ ಕಾಶೀ ಚೌಖಂಬಾ ಶಿರೋಮಣೀ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷೀ ದೊರೆಯುವುದು.

ಸಣ್ಣ ಅಡ್ಕೆ ಪ್ರಮಾಣದ ಕಾಸರ 1ಕ್ಕೆ ಆಣೆ 1 ರಿಂದ ರೂ. 25ರ ವರೆಗೆ. 108 ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಆಣೆ 3ರಿಂದ ರೂ. 25ರ ವರೆಗೆ. ಗೌರೀಶಂಕರ ರುದ್ರಾಕ್ಷಿ 1ಕ್ಕೆ ರೂ. 3ರಿಂದ ರೂ. 50ರ ವರೆಗೆ. ಮತ್ತು 3—4—5—5—7—8 ಮುಖಗಳ ಕಾಳು 1ಕ್ಕೆ ಆಣೆ 4 ರಿಂದ ರೂ. 10. ಮತ್ತು 9—10—11 ಮುಖಗಳುಳ್ಳ ಕಾಳು 1ಕ್ಕೆ ರೂ. 1ರಿಂದ 30ರ ವರೆಗೆ. 12—13—14 ಮುಖದ ಕಾಳು 1ಕ್ಕೆ ರೂ. 40ರಿಂದ 100ರ ವರೆಗೆ. ಸಣ್ಣ ರುದ್ರಾಕ್ಷೀ ಅವರೆ ಕಾಳಿಗಿಂತ ಸಣ್ಣದಾಗುತ್ತ ಕ್ರಯ ಜಾಸ್ತಿ. ದೊಡ್ಡ ರುದ್ರಾಕ್ಷೀ ಅಡಕೆಗಿಂತ ದೊಡ್ಡದಾಗುತ್ತ ಕ್ರಯ ಜಾಸ್ತಿ ಆಗುವದು. (ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ. 1 ಆಣೆ ಸ್ಟಾಂಪು ಕಳಿಹಿಸಿದರೆ 3 ಇನಾಮುಗಳು—1 ವಿಶ್ವೇಶ್ವರ ಪಟ. 1 ಕಾಶೀ ನಕ್ಷೆ, 1 ಕಾಶಿ ಪಿತಾಂಬರ ಕೆಟಲಾಗಿನೊಡನೆ 3 ಇನಾಮುಗಳು.)

ಶಿರೋಮಣಿ ನಾರಾಯಣಾಚಾರ್ಯ,
52—7 ಚೌಖಂಬಾ, ಬಿನಾರಿಸ್ (ಕಾಶೀ.)

ಪಂಡಿತ ಜವಾಹೀರಲಾಲ್ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣ ಪದಕವನ್ನು ಪಡೆದ,

ಒಂದೇ ಸಮನಾಗಿ ಮೂವತ್ತೈದು ವರ್ಷದ ಅನುಭವದಿಂದ ಹಿಂದುಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ, ಆಯುರ್ವೇದೋಕ್ತ ತಾಜಾ ಮತ್ತು ಪೌಷ್ಟಿಕ ವನಸ್ಪತಿಗಳಿಂದ ತಯಾರಿಸಿರುವ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಭಂಗಾರದ ಮೆಡಲುಗಳನ್ನು ಪಡೆದು ಪರದೇಶದಲ್ಲಿ ಧಾರಾಳವಾಗಿ ಖರ್ಚಾಗುವ

ಶಕ್ತಿವರ್ಧಕ ಉತ್ತಮ ತರಗತಿಯ ಟಾನಿಕ್

ದ್ರಾಕ್ಷಾಮೃತ.

ಅನೇಕ ವನಸ್ಪತಿ ರಸಾರ್ಕಗಳಿಂದ ಶಾಸ್ತ್ರೋಕ್ತವಾಗಿ ಸ್ವದೇಶೀ ಯಂತ್ರೋಪಕರಣದಿಂದ ತಯಾರಿಸಿದ ಮಧುರಾಮೃತ.

ಇದರ ಸೇವನೆಯಿಂದ ಉಷ್ಣ (ಗರಮಿ), ಧಾತುಸ್ರಾವ, ಸ್ವಪ್ನಾವಸ್ಥೆ, ಕೈಕಾಲು, ಕಣ್ಣುಗಳಿಗೆ ಉರಿ, ಮಲಬದ್ಧತೆ ಮುಂತಾದವು ಗುಣವಾಗುವದಲ್ಲದೆ ಜೀರ್ಣಶಕ್ತಿಯು ಹೆಚ್ಚಿ ದೇಹದಾರ್ಢ್ಯವುಂಟಾಗುವುದು. ಇದರಿಂದ ನಪುಂಸಕತ್ವವಿದ್ದಲ್ಲಿ ಅದು ಹೋಗಿ ವೀರ್ಯ ವೃದ್ಧಿಯಾಗುವದು. ಹೆಂಗಸರಿಗೂ ಗಂಡಸರಿಗೂ ಇದು ಗುಣಕಾರಿ ಇದೆ. ಮುಟ್ಟಾಗದಿದ್ದರೆ ಮತ್ತು ಉಷ್ಣ (ಗರಮಿ) ರೋಗಗಳಿದ್ದರೆ ಅವೆಲ್ಲವೂ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವದು. ಈ ಔಷಧದ 3 ಬಾಟ್ಲಿಗಳ ಸೇವನೆಯಿಂದ ಪೂರ್ಣ ಗುಣ ಆಗುತ್ತದೆ. 1 ಬಾಟ್ಲಿಯನ್ನು ಸೇವಿಸುವದರಲ್ಲೇ ಇದರ ಗುಣ ಕಂಡುಬರುವದು. ಪ್ರಮಾಣ:—ಬೆಳಗಿನಲ್ಲಿ ಒಂದು ತೊಲೆ ಮತ್ತು ಸಂಜೆಗೆ ಒಂದು ತೊಲೆ ತಕ್ಕೊಳ್ಳಬೇಕು.

ಬೆಲೆ—1 ಬಾಟ್ಲಿಗೆ ರೂ. 1—4—0, 3 ಬಾಟ್ಲಿಗೆ ರೂ. 3—8—0, 1 ಡಜನ್ ಬಾಟ್ಲಿಗಳಿಗೆ ರೂ. 12—0—0.

ಮ್ಯಾನೇಜರ್:—ದ್ರಾಕ್ಷಾಮೃತ ಡಿಪೋ, ಪೋಸ್ಟ್ ನಿಪ್ಪಾಣಿ ಜಿಲ್ಲಾ (ಬೆಳಗಾಮ್.)
ಕೊಡಗಿನ ಏಜಂಟರು—ಕೆ. ಶಿವಾಜಿರಾವ್ & ಬ್ರದರ್ಸ್, ಮಡಿಕೇರಿ.
ಬಿ. ಪುಟ್ಟಯ್ಯ ಶೆಟ್ಟಿ & ಸನ್ಸ್, ಸೋಮವಾರಪೇಟೆ.
52—3 ಎ. ಎನ್. ಹುಚ್ಚಯ್ಯ, ಮರ್ಚೆಂಟ್, ಗೋಣಿಕೊಪ್ಪಲು.

ಉತ್ತಮ ಪ್ರತಿಫಲ ಯಾವದರಲ್ಲಿ?



501 ಸಾಬೂನು— ಅತ್ಯಲ್ಪ ನೀರಿನಾಂಶದಿಂದ ಕೂಡಿದ, ಒಳ್ಳೇ ಗಟ್ಟಿ ಸಾಬೂನು.



ಅರ್ಧಾಂಶಕ್ಕಿಂತ ಹೆಚ್ಚು ನೀರು ಬೆರೆಸಿದ್ದು, ನೋಟಕ್ಕೆ ಒಳ್ಳೇ ಸಾಬೂನಿನಂತೆ ಕಾಣುವ ಇತರ ಸಾಬೂನ.

ಅಗ್ಗವಾದ—ಸಾಬೂನುಗಳನ್ನು ಕೊಂಡುಕೊಳ್ಳುವದು ಹೆಚ್ಚು ಖರ್ಚಿಗೆ ಕಾರಣ. ಯಾಕಂದರೆ ಸಾಬೂನಿಗಾಗಿ ನೀವು ಹಣಕೊಟ್ಟು ಅರ್ಧ ತುಂಡು ಸಾಬೂನನ್ನು ಮಾತ್ರ ಪಡೆಯುವಿರಿ. ಈ ಸಾಬೂನುಗಳಲ್ಲಿ 50% ರಷ್ಟು ನೀರೇ. 501 ಸಾಬೂನು ಚೆನ್ನಾಗಿ ಕೊಳೆಯನ್ನು ತೆಗೆಯುತ್ತದೆ ಮತ್ತು ಹೆಚ್ಚು ಬಾಳಿಕೆ ಬರುವದರಲ್ಲಿ ಆಶ್ಚರ್ಯವಿಲ್ಲ!

501 Soap

ವೆಚ್ಚ ಕಡಿಮೆ.
ವಸ್ತ್ರ ಬಾಳಿಕೆ.
ಶ್ರಮ ಅತೀ ಕಡಮೆ!

ಟಾಮ್‌ಕೋ ಮಾರಾಟದ ಮಳಿಗೆ, TOMCO ೧, ಸೆಂಟ್ರಲ್ ಸ್ಟ್ರೀಟ್, ಬೆಂಗಳೂರು ದಂಡು.

ತಯಾರಿಸುವವರು—ಟಾಟಾ ಆಯಿಲ್ ಮಿಲ್, ಕಂಪೆನಿ, ಲಿಮಿಟೆಡ್, ಬೊಂಬಾಯಿ ಮತ್ತು ಟಾಟಾಪುರಂ
52—20. ಕೊಡಗಿನ ಡಿಸ್ಟ್ರಿಬ್ಯೂಟರ್—ಬಿ. ಎಸ್. ಸುಬ್ಬಣ್ಣ, ಸಂತೆಪೇಟೆ, ಮೈಸೂರು.

ವಜ್ರದ ಉಂಗುರಗಳು 1ಕ್ಕೆ ೧೨ ಆಣೆ.



ಈ ಉಂಗುರಗಳನ್ನು ಇಮಿಟೇಷನ್ ವಜ್ರದ ಕಲ್ಲುಗಳನ್ನು ಇಟ್ಟು ರೋಲ್ಡ್ ಗೋಲ್ಡ್ ಭಂಗಾರದಿಂದ ಕಟ್ಟಡ ಕಟ್ಟಿದೆ. ಇದರ ಬಣ್ಣವು ಎಂದಿಗೂ ಕೆಡದಂತೆ ಎಲೆಕ್ಟ್ರಿಕ್ ಪವರಿನಿಂದ ಬಣ್ಣ ಕೊಟ್ಟಿದೆ. 1ಕ್ಕೆ 12 ಆಣೆ

3 ಉಂಗುರಗಳಿಗೆ 1 ಟೈಂಪೀಸನ್ನೂ, 6 ಉಂಗುರಗಳಿಗೆ 1 ಪಾಕೆಟ್ ವಾಚನ್ನೂ, 12 ಉಂಗುರಗಳಿಗೆ 1 ರೋಲ್ಡ್ ಗೋಲ್ಡ್ ಭಂಗಾರದ ರಿಸ್ಟ್ ವಾಚನ್ನೂ ಇನಾಮಾಗಿ ಕೊಡುವೆವು. ಉಂಗುರಗಳಲ್ಲಿ ಬೇಕಾದ ಹೆಸರನ್ನು ಕೆತ್ತಿ ಕೊಡುವೆವು.

ವಿಳಾಸ—
Mehta & Co.,
Periyanayakaran Street,
G. T. Madras.

ಸ್ತ್ರೀ ಪುರುಷರ ಮರ್ಮಗಳನ್ನು ಚಿತ್ರಪಟಗಳ ಸಹಿತ, ಇದ್ದದ್ದನ್ನು ಇದ್ದಂತೆ ತಿಳಿಸುವ

ಸ್ತ್ರೀ ದಾಂಪತ್ಯ ರಹಸ್ಯ

ಎಂಬ ಮರ್ಮಶಾಸ್ತ್ರ.

ಈ ಪುಸ್ತಕವು ಫ್ರೆಂಚ್, ಹಿಂದೂಸ್ಥಾನೀ ಭಾಷೆಗಳಲ್ಲಿ ಬಹುಕಾಲದಿಂದ ಗುಪ್ತವಾಗಿತ್ತು. ಈಗ ನಾವು ಬಹು ಪ್ರಯಾಸದಿಂದ ಸಂಪಾದಿಸಿ ಎಲ್ಲರಿಗೂ ವಿವರವಾಗಿ ತಿಳಿಯುವ ಹಾಗೆ ಸುಲಭ ಶೈಲಿಯಲ್ಲಿ ಕನ್ನಡ ಭಾಷೆಯಲ್ಲಿ ಭಾಷಾಂತರಿಸಿ, ಫೋಟೋಗಳ ಸಹಿತ ಥಳಥಳಿಸುವ ಗ್ಲೇಜು ಕಾಗದದಲ್ಲಿ 300 ಪೇಜುಗಳು ಅಂದವಾಗಿ ಮುದ್ರಿಸಿರುತ್ತೇವೆ. ಈ ಪುಸ್ತಕದಲ್ಲಿ ಸ್ತ್ರೀ ಪುರುಷರಿಗೆ ಬೇಕಾದ ಎಲ್ಲಾ ಮರ್ಮರಹಸ್ಯಗಳು ಪುರುಷರು

ಸ್ತ್ರೀಯರಲ್ಲಿ ನಡೆದುಕೊಳ್ಳಬೇಕಾದ ಬಗೆ ಸ್ತ್ರೀಪುರುಷರ ಜಾತಿಯ ಲಕ್ಷಣಗಳು ಸ್ತ್ರೀಯರಿಗೆ ಬೇಕಾದ ಅನೇಕ ಗುಪ್ತ ವಿಷಯಗಳ ಸಂಭೋಗದಿಂದಾಗುವ ಸಂತೋಷ ಜನನೇಂದ್ರಿಯಗಳ ವರ್ಣನೆ ಹಸ್ತ ಪ್ರಯೋಗದಿಂದಾಗುವ ಹಾನಿ, ಗರ್ಭಿಣಿಗೆ ಬೇಕಾದ ಅನೇಕ ಮರ್ಮ ನಿಯಮಗಳು, ಶಿಶು ಉತ್ಪತ್ತಿ ವಿಧ ಗುಪ್ತ ವ್ಯಾಧಿಗಳ ಚಿಕಿತ್ಸೆ ಶಯನಗೃಹದ ರಹಸ್ಯ ನಿಯಮಗಳು ಮಾನವ ಶರೀರದ ಮರ್ಮಗಳ ವಿವರ ನಪುಂಸಕತ್ವಕ್ಕೆ ಚಿಕಿತ್ಸೆ ಇನ್ನೂ ಸ್ತ್ರೀಪುರುಷರುಗಳಿಗೆ ಬೇಕಾದ ಚಿತ್ರಪಟಗಳ ಸಹಿತ ಪ್ರಿಂಟಾಗಿದೆ. ಬೆಲೆ ಪುಸ್ತಕ ಒಂದಕ್ಕೆ ರೂ. 1—0—0.

ವಿಳಾಸ—MEHTA & Co.,
Periyanayakaran Street,
12—7 G. T. Madras.

೨೧ನೇ ಕನ್ನಡ ಸಾಹಿತ್ಯ ಸಮ್ಮೇಳನ.

ಅಧ್ಯಕ್ಷರು:-ಶ್ರೀ ಎಸ್. ಎಸ್ ಸುಬ್ಬರಾಯರವರು.

ಬರುವ ಡಿಸೆಂಬರ್ ತಿಂಗಳಲ್ಲಿ ಬೊಂಬಾಯಿ ಪಟ್ಟಣದ ನಡೆಯಲಿರುವ 21ನೇ ಕರ್ಣಾಟಕ ಸಾಹಿತ್ಯ ಸಮ್ಮೇಳನ ಅಧ್ಯಕ್ಷರಾಗಬೇಕೆಂದು ಅಲ್ಲಿಯ ಸ್ವಾಗತ ಮಂಡಲಿಯೂ ಪರಿಷತ್ತಿನ ಕಾರ್ಯನಿರ್ವಾಹಕ ಮಂಡಳಿಯೂ ಬೇಡಿಕೊಂಡ ಮೇರೆಗೆ ಮೈಸೂರು ಸಂಸ್ಥಾನದ ವಿದ್ಯಾ ಪ್ರಚಾರದ ಇಲಾಖೆಯ ಡೈರೆಕ್ಟರಾದ ಶ್ರೀಮಾನ್ ಎನ್. ಎಸ್. ಸುಬ್ಬರಾವ್ ಎಂ. ಎ (ಕ್ಯಾಂಟಬ್) ಬಾರ್-ಎಟ್-ಲಾ ರವರು ಅನುಗ್ರಹಮಾಡಿ ಒಪ್ಪಿರುತ್ತಾರೆ. ಘನ ವಿದ್ವಾಂಸರೂ, ವಿದ್ಯಾಶಾಸ್ತ್ರಾಧ್ಯಕ್ಷರೂ ಆಗಿ ಭಾರತದ ಸಕಲ ವಿದ್ವನ್ಮಂಡಳಿಯಲ್ಲಿ ಮನ್ನಣೆ ಪಡೆದಿರುವ ಈ ಮಹನೀಯರು ಮುಂದಿನ ಸಮ್ಮೇಳನದ ಅಧ್ಯಕ್ಷಸ್ಥಾನವನ್ನು ವಹಿಸಲು ಒಪ್ಪಿರುವುದು ಎಲ್ಲ ಕರ್ಣಾಟಕಕ್ಕೂ ಸಂತೋಷ ಪ್ರದವಾಗಿರುವುದು.

ಸಾಹಿತ್ಯ ಸಮ್ಮೇಳನದ ಜೊತೆಗೆ ಕಲಾ ಪ್ರದರ್ಶನ ಮೊದಲಾದ ಅನೇಕ ಆಕರ್ಷಕವಾದ ಉತ್ಸವಗಳನ್ನು ಏರ್ಪಡಿಸಬೇಕೆಂದು ಬೊಂಬಾಯಿ ಸ್ವಾಗತ ಮಂಡಲಿಯವರು ಪ್ರಯತ್ನಪಡುತ್ತಿದ್ದಾರೆ. ಎಲ್ಲ ಕನ್ನಡಿಗರೂ ಅಲ್ಲಿಗೆ ದಯಮಾಡಿ ಉತ್ಸವವನ್ನು ಯಶಸ್ವಿಗೊಳಿಸಬೇಕೆಂದು ಪರಿಷತ್ತು ಬೇಡುತ್ತದೆ.

ಬೆಂಗಳೂರು ಸಿಟಿ, ತಾ. 12—9—1935. } ಸಿ. ಕೆ. ವೆಂಕಟರಾಮಯ್ಯ, (ಗೌ. ಕಾರ್ಯದರ್ಶಿ.)

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ]

ವೀರಶೈವ ವಿದ್ಯಾನಿಧಿ.

ಶನಿವಾರಸಂತೆ ವೀರಶೈವ ವಿದ್ಯಾನಿಧಿ ಸಂಘದ ಪ್ರೆಸಿಡೆಂಟರಾದ ಮೆ. ಹೆಚ್. ಕಾಳೇಗೌಡರಲ್ಲಿ ವಿನಂತಿ:—ದೇಶದಲ್ಲಿ ಹಲವು ವಿದ್ಯಾಭಿವೃದ್ಧಿ ಸಂಘಗಳು ಬಹು ಉತ್ಸಾಹದಿಂದ ನಡಿಸಲ್ಪಡುತ್ತಿವೆ. ಶನಿವಾರಸಂತೆ ವಿದ್ಯಾಭಿವೃದ್ಧಿ ಸಂಘವು ನಾಲ್ಕು ವರ್ಷಗಳಿಂದ ತಟಸ್ಥವಾಗಿರುವ ಕಾರಣವೇನೆಂದು ತಿಳಿಯದು. ಇದಕಾರಣ ಈ ಸಂಘದ ಅಧ್ಯಕ್ಷರಾದ ನೀವು ಸಂಬಂಧಪಟ್ಟ ಮೆಂಬರುಗಳಿಗೆ ತಿಳಿಸಿ, ಸಂಘದ ಮೀಟಿಂಗನ್ನು ಕೂಡಲೇ ಸೇರಿಸಿ, ಅದರ ಕಾರ್ಯಕಲಾಪಗಳನ್ನು ಮುಂದುವರಿಸಲು ಏರ್ಪಾಡು ಮಾಡಬೇಕಾಗಿ ಕೋರಿಕೆ.

ಜಿ. ಸಂಣಯ್ಯ.

ಕಾಶಿಯಲ್ಲಿ ಕಾವೇರಿ ಕುಟೀರ.

—ಶ್ರೀ ಶಿಭಿಕ್ಷು ಕಾಳಮ್ಮನವರು ಐದು ತಿಂಗಳ ತಮ್ಮ ಕೊಡಗಿನ ಪ್ರವಾಸವನ್ನು ಮುಗಿಸಿಕೊಂಡು ಇದೇ ಸೆಪ್ಟಂಬರು ತಾರೀಕು 12 ನೇ ಗುರುವಾರ ದಿನ ಪೊನ್ನಂಪೇಟೆಯಿಂದ ಕಾಶಿಗೆ ಪ್ರಯಾಣಮಾಡಿದರಾಗಿ ತಿಳಿದುಬರುತ್ತದೆ. ಅಲ್ಲದೆ ಕೊಡಗಿನ ಪಿಂಚಿನ್‌ದಾರರ ಮುಂದಾಳತ್ವದಲ್ಲಿ ಕಾಶಿಯಲ್ಲಿ ಕಾವೇರಿ ಕುಟೀರವೆಂಬ ಹೆಸರಿನ ವಸತಿಯೊಂದನ್ನು ಸ್ಥಾಪಿಸುವದು ಯೋಗ್ಯವೆಂದು ದಿವಾನ್ ಬಹದೂರ್ ಕೇಟೋಳಿರ ಚಂಗಪ್ಪನವರು ತನ್ನ ಸಹಾನುಭೂತಿಯನ್ನು ವ್ಯಕ್ತಗೊಳಿಸಿದ ಮೇರೆ ಸದರಿ ಕಾರ್ಯವನ್ನು ಕೈಕೊಳ್ಳುವುದಕ್ಕಾಗಿಯೂ ಮತ್ತು ಕೊಡಗಿನ ಶ್ರೀರಾಮೇಶ್ವರ ಕ್ಷೇತ್ರದ ಮುಂದಿನ ರಥೋತ್ಸವಕ್ಕೆ ತಾನು ಹಾಜರಿರಬೇಕಾದ್ದು ತನ್ನ ಒಂದು ಕರ್ತವ್ಯವೆಂತಲೂ, ಈ ಎರಡು ಮುಖ್ಯ ಉದ್ದೇಶದಿಂದ ಮುಂದಿನ ಮಕರ ಸಂಕ್ರಮಣಕ್ಕೆ ನಡೆಯುವ ಗಂಗಾಸಾಗರ ಯಾತ್ರೆಯನ್ನು ಮುಗಿಸಿಕೊಂಡು ಮತ್ತೊಂದು ಪ್ರವಾಸಕ್ಕಾಗಿ ಕೊಡಗಿಗೆ ಬರುತ್ತಾರಾಗಿ ತಿಳಿದುಬರುತ್ತದೆ.

'ದೇಶಿಯ.'

ಸಾಹಸ ಕಾರ್ಯ.

ಮಹನೀಯರೇ,

ಬೆಂಗಳೂರಲ್ಲಿ ಟೈಲರಿಂಗ್ ವಿದ್ಯಾಭ್ಯಾಸ ಮಾಡುತ್ತಿರುವ ಮೆ. ಡಿ. ಕೆ. ಮೇದಪ್ಪನವರು ಕಳೆದ ತಿಂಗಳ 27 ನೇ ತಾರೀಕಿನಲ್ಲಿ, ಅವರ ಕೆಲಸ ತೀರಿ ಹಿಂದಕ್ಕೆ ಬರುವ ಸಮಯದಲ್ಲಿ, ಅವರನ್ನು ಬೆಂಗಳೂರಿನ ಮೂರು ಕೇಡಿಗಳು, ತಾವು ನೀಲಗಿರಿಯಿಂದ ಬಂದವರೆಂತಲೂ, ಅಲ್ಲಿ ಒಬ್ಬರ ಮನೆಕಟ್ಟುತ್ತಿರುವಾಗ ಭೂಮಿಯಡಿಯಲ್ಲಿ ಚಿನ್ನದ ಸುಮಾರು ಸಾವಿರ ರೂಪಾಯಿ ಬೆಲೆ ಬಾಳುವ ಆಭರಣಗಳು ಸಿಕ್ಕಿತ್ತೆಂತಲೂ, ಅದನ್ನು ಅಲ್ಲೇ ವಿಕ್ರಯಿಸಿದರೆ ಸಂಶಯ ಉಂಟಾಗುತ್ತದೆಂದು ಬೆಂಗಳೂರಿಗೆ ಬಂದು ಬಿಟ್ಟಿದ್ದೇವೆಂತಲೂ, ಅದನ್ನು ತಮಗಾಗಿ ಬೇಕಾದರೆ 400 ರೂಪಾಯಿಗೆ ಕೊಟ್ಟುಬಿಡುತ್ತೇವೆಂದು ಹೇಳಿ, ಚಿನ್ನಕ್ಕಿಂತಲೂ ಚೆನ್ನಾಗಿ ಹೊಳೆಯುತ್ತಿರುವ ಬರೀ ತಾಂಮ್ರದ ಸರಪಣಿಯನ್ನು ತೋರಿಸಿದರಂತೆ. ಆದರೆ ಮೇದಪ್ಪನವರಿಗೆ ಅವರ ಮೇಲೆ ಸಂಶಯ ಹುಟ್ಟಿದ್ದರಿಂದ, ಈ ವಿಷಯವನ್ನು ಸಬ್ ಇನ್ಸ್ಪೆಕ್ಟರ್ ಮೆ. ಕಂಡ್ರತಂಡ ಅಪ್ಪಚ್ಚನವರಿಗೆ ತಿಳಿಸಿ, ಅವರನ್ನು ಹಿಡಿಯಬೇಕೆಂದು ಬರಲು ಅವರು ನಾನಾ ಕಡೆಗೆ ಓಡಿಬಿಟ್ಟರೆಂದೂ, ಆದರೂ ಮೆ. ಅಪ್ಪಚ್ಚನವರು ಮತ್ತು ಮೇದಪ್ಪನವರು ಬಹು ದೂರದ ವರೆಗೆ ಬೆನ್ನಟ್ಟಿ, ಹಿಡಿದು ತಂದರೆಂದೂ, ಈ ಕೇಸಿನಲ್ಲಿ ಕಳೆದ ವಾರ ಈ ಕೇಡಿಗಳಿಗೆ ಮೇಜಿಸ್ಟ್ರೇಟರ ಕೋರ್ಟಿನಲ್ಲಿ ಆರಾರು ತಿಂಗಳು ಕಠಿಣ ಸಜೆ ವಿಧಿಸಿದಾವರೆಂದೂ, ಮತ್ತು ಮೇದಪ್ಪನವರ ಈ ಸಾಹಸಕ್ಕೆ ಮೆಚ್ಚಿ ಒಂದು ಪೋಲೀಸು (ರಿವಾರ್ಡ್) ಇನಾಮು ಕೊಡುವ ಹಾಗೆ ಬರೆದಿರುವರೆಂದೂ ಬೆಂಗಳೂರಿನ 'ಡೈಲಿ ಪೋಸ್ಟ್' ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿದೆ.

'ತಿಳಿದವ.'

ತಪ್ಪಿ ಹೋದ ಆನೆಯನ್ನು ಹಿಡಿದದ್ದು.

ಅಯ್ಯಾ,

ಈ ತಾ. 6ರ 'ಕೊಡಗು' ಪತ್ರಿಕೆಯಲ್ಲು ತಿತಿಮತಿ ರೇಂಜಿನಲ್ಲಿ ಬಿಟ್ಟು ಹೋದ 'ಜುಬಿಲಿ'ಯೆಂಬ ಆನೆಯನ್ನು ಆ ರೇಂಜಿನ ಫಾರೆಸ್ಟ್ ಗಾರ್ಡಾಗಿರುವ ಚಂಗಚಂಡ ಮುದ್ದಪ್ಪನವರು ಪತ್ತೆ ಮಾಡಿ ಬಹಳ ಸಹಾಸದಿಂದ ತಾನೇ ಹಿಡಿದರೆಂದು ಪ್ರಕಟಿಸಿರುವುದು ನಿಜವಾದ ಸಂಗತಿಯಲ್ಲ. ತಾ 23—8—35 ರ ಸಾಯಂಕಾಲ ಸದರಿ ಮುದ್ದಪ್ಪನವರು ಕುರುಬರೊಡಗೂಡಿ ಕೆಲಸದಿಂದ ವಾಪಾಸುಬರುತಿದ್ದಾಗ್ಯೆ ದಾರಿಯಲ್ಲಿ ಅಂದರೆ ಮತ್ತಿಗೋಡ್ ಫಾರೆಸ್ಟಿನಲ್ಲು ಸದರಿ ಆನೆಯನ್ನು ಕಂಡು ಆ-ಸಾಯಂಕಾಲವೇ ತಿತಿಮತಿ ರೇಂಜಾಫೀಸರವರಿಗೆ ತಿಳಿಸಿದರು. ಕೂಡಲೆ ರೇಂಜಾಫೀಸರವರು ಅದಕ್ಕೆ ಸಲುವಾಗಿ ತಕ್ಕ ಬಂದೋಬಸ್ತು ಮಾಡಿದರು ಅದೇ ಮೇರೆ ಮಾರಣೆ ದಿನ ಬೆಳಿಗ್ಯೆ ಸದರಿ ಮುದ್ದಪ್ಪನವರೂ, ಆನೆ ಮಣೆದಾರರೂ, ಬೇರೆ ಕೆಲವು ಜನರೂ 2 ಸಾಕಾನೆಗಳನ್ನು ತೆಗೆದುಕೊಂಡು ಮೊದಲು ದಿನ ಆನೆಯನ್ನು ಕಂಡ ಸ್ಥಳಕ್ಕೆ ಹೋಗಿ ಅಲ್ಲಿ ಸುತ್ತ ಮುತ್ತಲೂ ಹುಡುಕುವಷ್ಟರಲ್ಲಿ ಅಂದರೆ ಸಾಧಾರಣ 12 ಗಂಟೆಯ ಸಮಯಕ್ಕೆ ಆನೆಯನ್ನು ಕಾಣಲು ಸಿಕ್ಕಿ ಅವರೆಲ್ಲ ಸೇರಿ ಆನೆಯನ್ನು ಹಿಡಿಯಲು ಪ್ರಯತ್ನಪಡುತ್ತಿರುವಾಗ್ಯೆ ಆನೆಯು ಬೆದರಿ ಸದರಿ ಮುದ್ದಪ್ಪನವರು ನಿಂತುಕೊಂಡಿದ್ದಸ್ಥಳಕ್ಕಾಗಿ ಓಡುವಾಗ್ಯೆ ಅದಕ್ಕೆ ಮುಂಚಿತವಾಗಿ ಕಾಲು ಜಾರಿ ಬಿದ್ದಿದ್ದ ಮುದ್ದಪ್ಪನವರ ಮೇಲೆ ದಾಟಿ ಹೋಗುವಾಗ್ಯೆ ಆನೆಯ ಕಾಲು ತಗಲಿ ಮುದ್ದಪ್ಪನವರಿಗೆ ಸ್ವಲ್ಪ ಜಖಂ ಆಯಿತು. ಆ ಕೂಡಲೆ ಅವರು ವೀರರಾಜೇಂದ್ರಪೇಟೆ ಆಸ್ಪತ್ರೆಗೆ ಒಯ್ಯಲ್ಪಟ್ಟರು. ಅನಂತರ ಸಾಧಾರಣ 3 ಗಂಟೆಯ ಮೇಲೆ ಸದರಿ ಆನೆಯನ್ನು ಬಾಕಿ ಇದ್ದವರು ಸಾಕಾನೆಗಳ ಸಹಾಯದಿಂದ ಹಿಡಿದದ್ದಾಗಿದೆ. ಆನೆಯನ್ನು ಹಿಡಿಯುವುದರಲ್ಲಿ ಸದರಿ ಮುದ್ದಪ್ಪನವರು ಯಾವ ಹೆಚ್ಚಿನ ಭಾಗವನ್ನೂ ವಹಿಸಿಕೊಂಡಿರುವುದಿಲ್ಲ.

ಕಂಣಾರೆ ಕಂಡವ.

ಅತೀ ಸುಲಭ ದರದಲ್ಲಿ ನಿಮಗೆ ಉತ್ಕೃಷ್ಟವಾದ ಕೋವಿ ಮತ್ತು ತೋಟಾಗಳು.

ಗ್ಯಾರಂಟಿಯೊದ ಹೊಸ ಮಾಲುಗಳು.



ಬರಲಿಕ್ಕಿರುವ ಶಿಕಾರಿ ಸಮಯಕ್ಕಾಗಿ.

ASHOO TOSH DAW & CO.,

GUN MAKERS.

"DAW BUILDING" 184, DHARMTALA ST., CALCUTTA.

ಒಮ್ಮೆ ವಿಚಾರಿಸಿ ನೋಡಿ.] [ಒಂದುಸಲ ಪರೀಕ್ಷೆ ಮಾಡಿ

4—3] ನಿಮ್ಮ ಕಷ್ಟದ ಹಣವನ್ನು ವೃಥಾ ದುಂದುಮಾಡಬೇಡಿ. ಕಾಸಿಗೆ ತಕ್ಕ ಮಾಲನ್ನು ಪಡೆದುಕೊಳ್ಳಿ.

ಪ್ರಸಿದ್ಧ ಔಷಧಗಳು.

ಪ್ರಸಿದ್ಧಿ ಹೊಂದಿದ ಶೀಘ್ರ ಗುಣ ಕೊಡುವ ದಿವ್ಯ ಔಷಧಗಳು.



ನವರತ್ನ

ಅಶೋಕಾರಿಷ್ಟ.

ಸ್ತ್ರೀಯರು ಕ್ರಮವಾಗಿ ಮುಟ್ಟಾಗದಿರುವಿಕೆ ಮುಟ್ಟಿನಿಂದುಂಟಾಗುವ ಹೊಟ್ಟೆನೋವು, ಸೊಂಟನೋವು, ನಿಶ್ಶಕ್ತಿ, ಬೆನ್ನುಮೂಳೆನೋವು, ಸೋಮರೋಗ, ಕುಸುಮ ಜಾಡ್ಯ ವಗೈರೆ ಪರಿಹರಿಸಿ ಸ್ತ್ರೀಯರ ಆರೋಗ್ಯವನ್ನು ಕಾಪಾಡುವ ಗರ್ಭ ರಕ್ಷಿಣಿಯು.

ದೊಡ್ಡ ಕುಪ್ಪಿ 2—8—0.
ಅರ್ಧ ಕುಪ್ಪಿ 1—6—0.

ನವರತ್ನ

ದ್ರಾಕ್ಷಾರಿಷ್ಟ.

ಅಜೀರ್ಣ, ಅಗ್ನಿಮಾಂದ್ಯ ಅರುಚಿ ನಿಶ್ಶಕ್ತಿ ವಗೈರೆ ಪರಿಹರಿಸಿ, ದೇಹಕ್ಕೆ ಪುಷ್ಟಿಯನ್ನೂ ರಕ್ತವೃದ್ಧಿಯನ್ನೂ ಉಂಟುಮಾಡಿ ಮನಸಿಗೆ ಉಲ್ಲಾಸವನ್ನೂ ಕೊಡುವ ಪ್ರಸಿದ್ಧವಾದ ಔಷಧವು. ಕ್ರಯ ದೊಡ್ಡ ಕುಪ್ಪಿ 1—8—0, ಅರ್ಧ ಕುಪ್ಪಿ 0—13—0.

ವಿ. ಸೂ:—ಔಷಧ ಪಡೆಯುವಾಗ ನವರತ್ನ ಫಾರ್ಮಸಿಯ ವಿಳಾಸ ನೋಡಿ ಪಡೆಯಿರಿ.

ಸ್ಟೋಕಿಸ್ಟ್—ಎ. ಎಸ್. ಮಾಚಯ್ಯ, ಒಟ್ಟೆ ವ್ಯಾಪಾರಿ, ಸುಂಟಿಕೊಪ್ಪ. } ಏಜೆಂಟ್—ವಿ. ಬಿ. ಕಾಮತ್, ಮಹದೇವಪೇಟೆ, ಮಡಿಕೇರಿ.

52—20

ನವರತ್ನ ಫಾರ್ಮಸಿ,

FRASER'S

FOOTWEAR
have
the HALLMARK of
distinctive finish,
upto-date style,
fine workmanship
best materials.

AMAZING VALUE FOR LOW PRICE.

HARDWEAR BOOTS & SHOES,
for estate and monsoon a speciality.

G. W. FRASER & CO., CALICUT.

12—2

ಅನ್‌ರಿಡೀಮ್ಡ್ ಜಾಗದ ಗಂಧದ ಮರಗಳಿಗೆ ಬೋನಸು ಕೊಡುವ ನಿಬಂಧನೆಗಳ ನಿಷೇಧ

ದೇಶದವರಿಗೆಂದೂ ಸಮ್ಮತವಲ್ಲ.

ರಾಮಸ್ವಾಮಿ ಕಣಿವೆಯವರ ಪಬ್ಲಿಕ್ ಮೀಟಿಂಗು.

ತಾ. 16—9—35ರಲ್ಲು ರಾಮಸ್ವಾಮಿ ಕಣಿವೆ ಶ್ರೀ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ಮೆ. ಹೆಬ್ಬಾಲೆ ಕಾಶಿ ತಿಮ್ಮಣ್ಣನವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಕೆಗಳು

ಈ ಸಭೆಗೆ ಸೋಮವಾರಪೇಟೆಯಿಂದ ಶ್ರೀಮತಿ ಡಿ. ಸಾಕಮ್ಮನವರು ದಯಮಾಡಿಸಿದ್ದರು. ಕಣಿವೆ ಹೋಬಳಿ ಪರವಾಗಿ ಸುಮಾರು 50 ಜನಗಳ ವರೆಗೆ ದಯಮಾಡಿಸಿದ್ದರು ಮೆ. ನಿಡ್ತದ ಸುಬ್ಬಣ್ಣಯ್ಯನವರು ಮತ್ತು ಫ್ರೇಜರ್‌ಪೇಟೆ ಮೆ. ರಾಮಶೆಟ್ಟರು ತಮಗೆ ಅನಾರೋಗ್ಯದ ದೆಸೆಯಿಂದ ಈ ದಿನದ ಮೀಟಿಂಗಿಗೆ ಬರಲು ಅನಾನುಕೂಲವಾಯಿತೆಂತ ಕಾಗದಗಳನ್ನು ಬರೆದಿದ್ದರು.

ಮೆ. ನಿಡ್ತ ಸುಬ್ಬಣ್ಣಯ್ಯನವರ ಪರವಾಗಿ ನಿಡ್ತದಿಂದ ಬಂದಿದ್ದ ಮೆ. ಕೃಷ್ಣಪ್ಪನವರನ್ನು ಗಂಧದ ಮರಗಳಿಗೆ ಹೊಸದಾಗಿ ಬೋನಸು ಕೊಡಲು ಸರ್ಕಾರದವರು ತಯಾರಿಸಿರುವ ಕರಡು ನಿಬಂಧನೆಗಳನ್ನು ವಿವರಿಸಬೇಕಾಗಿ ಅಧ್ಯಕ್ಷರು ಕೇಳಿಕೊಂಡ ಮೇರೆ ಅವರು ಸದರಿ ನಿಬಂಧನೆಗಳನ್ನು ಕನ್ನಡದಲ್ಲಿ ಓದಿ ಹೇಳಿದ್ದಲ್ಲದೆ ಶನಿವಾರಸಂತೆ, ಕೊಡ್ಲಿಪೇಟೆ, ಸೋಮವಾರಪೇಟೆ ಮೀಟಿಂಗುಗಳಲ್ಲಿ ಈ ಸಂಬಂಧವಾಗಿ ನಡೆದ ಚರ್ಚೆಗಳನ್ನು ಸಾದ್ಯಂತವಾಗಿ ವಿವರಿಸಿದರು ಮತ್ತು ಅಲ್ಲಿ ಪಾಸಾದ ಠರಾವುಗಳನ್ನೂ ಓದಿ ತಿಳಿಸಿದರು.

ಅನಂತರ ಸಭಿಕರಲ್ಲಿ ಮೆ. ಗಳಿಾದ ಹೊನ್ನಪ್ಪನವರು, ಚಿಗಳ್ಳಿ ಹುಚ್ಚಪ್ಪನವರು, ತಿರಂಗಾಲದ ಮುರಿಗಪ್ಪನವರು, ಕಣಿವೆ ಕೃಷ್ಣಮೂರ್ತಿಶೆಟ್ಟರು ಮತ್ತು ಶ್ರೀಮತಿ ಡಿ. ಸಾಕಮ್ಮನವರು ಮುಂತಾದವರು ಈ ರೂಲ್ಸ್ ವಿಚಾರವಾಗಿ ಅನೇಕ ಚರ್ಚೆ ನಡಿಸಿ ಈ ಕೆಳಗೆ ಕಂಡ ಠರಾವುಗಳನ್ನು ಸರ್ವಾನುಮತದಿಂದ ಪಾಸುಮಾಡಿದರು.

1. ಹಾಲಿ ಸರ್ಕಾರದವರು ತಯಾರಿಸಿರುವ ನಂಬರು 67 ತಾ. 28—6—35ರ ಕರಡು ಬೋನಸ್ ರೂಲ್ಸ್ ಪೂರಾ ಅಪ್ರಿಯವಾಗಿರುವುದರಿಂದ ಈ ಡ್ರಾಫ್ಟು ಖಂಡಿತ ಜಾರಿಗೆ ಬರಬಾರದೆಂತ ನಿಶ್ಚೈಸಿದರು.

2 ಈ ಮೇಲ್ಕಂಡ ರೂಲ್ಸಿಗೆ ಬದಲಾಗಿ ಸರ್ಕಾರದವರು ಇದುವರೆಗೆ ರೈತರ ರಿಡೀಮ್ಡ್ ಜಾಗದ ಗಂಧಕ್ಕೆ ಕೊಡುತ್ತಿರುವ ಶರತ್ತಿನಂತೆಯೇ ಅನ್‌ರಿಡೀಮ್ಡ್ ಜಾಗದ ಗಂಧಕ್ಕೂ ಪ್ರತಿಫಲ ಕೊಡಬೇಕು. ರೈತರ ಮೇಲೆ ಯಾವ ನಿರ್ಬಂಧವೂ ಹಾಕಕೂಡದು.

3 ಕರಡು ನಿಬಂಧನೆ ಪ್ರಕಾರ 90 ದಿನದ ಅವಧಿಯು ಮುಗಿಯುತ್ತಾ ಬಂದಿರುವುದರಿಂದ ಈ ಅವಧಿಯನ್ನು ಒಂದು ವರ್ಷಕ್ಕೆ ಹೆಚ್ಚಿಸಬೇಕೆಂತ ಚೀಫ್ ಕಮಿಷನರ್ ಸಾಹೇಬರನ್ನು ಕೇಳಿಕೊಳ್ಳಬೇಕು.

4. ಈ ವಿಷಯಗಳನ್ನು ಚೀಫ್ ಕಮಿಷನರ್ ಸಾಹೇಬರಿಗೆ ಖುದ್ದು ಹೇಳಿಕೊಳ್ಳಲು ಆದಷ್ಟು ಬೇಗನೆ ಅಂದರೆ ಅವರು ಈಗ ಮಡಿಕೇರಿಯಲ್ಲಿರುವಾಗಲೇ ಒಂದು ಡೆಪ್ಯುಟೇಶನ್ ಹೋಗಬೇಕು. ಈ ಹೋಬಳಿ ಪರವಾಗಿ ಮೆ. ಯಸ್. ಯನ್. ರಾಮಶೆಟ್ಟರೂ ಮತ್ತು ಕಣಿವೆ ಮೆ. ಆರ್. ಕೆ. ವೆಂಕಟರಾಮಯ್ಯನವರು ಹೋಗಬೇಕು.

5 ಗಂಧದ ಮರಗಳ ವಿಷಯ ಚರ್ಚಿಸಲು ಉದ್ಯೋಗಸ್ಥರಲ್ಲದ, ರೈತರಿಂದ ಚುನಾಯಿಸಲ್ಪಟ್ಟ ಹೆಚ್ಚು ಸಂಖ್ಯೆಯುಳ್ಳ ಒಂದು ನಾನ್ ಅಫೀಷಿಯಲ್ ಸಮಿತಿಯನ್ನು ಏರ್ಪಡಿಸಿ ಅವರು ದೇಶದಲ್ಲೆಲ್ಲಾ ಸಂಚರಿಸಿ ರೈತರ ಅಭಿಪ್ರಾಯವನ್ನು ತೆಗೆದು ಕೊಂಡು ಅವರ ಸಲಹೆಯಂತೆ ಯಾವ ರೂಲ್ಸ್‌ಗಳನ್ನಾದರೂ ಮಾಡಬೇಕು.

6 ಇದೇ ಸೆಪ್ಟಂಬರ್ ತಿಂಗಳ ಕೊಡಗು ಗಜೆಟಿನಲ್ಲಿ ಪ್ರಕಟವಾಗಿರುವ ನಂಬರು 85 ತಾ. 10—5—35ರ ಇಸ್ತಿಹಾರಿನಲ್ಲಿ 5 ಗಂಧದ ಮರಗಳಿಗೆ ಮೇಲ್ಪಟ್ಟು ಇರುವ ಜಾಗಗಳನ್ನು ವ್ಯವಸಾಯಕ್ಕೆ ಕೊಡಲಾಗದೆಂತಲೂ, ಫಾರೆಸ್ಟು ಇಲಾಖೆಯವರು ಗುರ್ತು ಮಾಡುವ ಗಂಧದ ಆಶ್ರಯದ ಮರಗಳನ್ನು ಕಾಪಾಡಲು ಸಹ ಮುಚ್ಚಳಿಕೆ ತೆಗೆದುಕೊಳ್ಳಬೇಕೆಂತಲೂ ನಿರ್ಬಂಧದ ಷರತುಗಳನ್ನುಳ್ಳ ಡ್ರಾಫ್ಟು ರೂಲ್ಸುಗಳು ಇನ್ನು ಮುಂದೆ ರೈತರು ಹೊಸದಾಗಿ ವ್ಯವಸಾಯಕ್ಕೆ ಜಮೀನುಗಳನ್ನು ಪಡೆಯದಂತೆ ಅಡಚಣೆಮಾಡುವುದರಿಂದ ಅವನ್ನು ಜಾರಿಗೆ ತರದೆ ರದ್ದು ಮಾಡಬೇಕು

7, ಈ ಠರಾವುಗಳ ನಕಲು ಚೀಫ್ ಕಮಿಷನರ್ ಸಾಹೇಬರಿಗೂ, ಕಮಿಷನರ್ ಸಾಹೇಬರಿಗೂ, ಚೀಫ್ ಫಾರೆಸ್ಟು ಆಫೀಸರಿಗೂ, 'ಕೊಡಗು' ಮತ್ತು 'ಜನ್ಮಭೂಮಿ' ಪತ್ರಿಕೆಗಳಿಗೂ ಅಧ್ಯಕ್ಷರು ಕಳುಹಿಸಬೇಕು..

ಕಾಶಿ ತಿಮ್ಮಣ್ಣ,
(ಅಧ್ಯಕ್ಷ)

ಸೋಮವಾರಪೇಟೆ ಪಬ್ಲಿಕ್ ಮೀಟಿಂಗು.

ತಾ. 13—9—35 ರಲ್ಲು ಸೋಮವಾರಪೇಟೆ ಮಾರ್ಕೆಟಿನಲ್ಲಿ ನಡೆದ ಮೀಟಿಂಗಿನ ವಿವರ:—

ಸುಮಾರು 150 ಜನಗಳ ವರೆಗೆ ಸೇರಿದ್ದರು. ಪ್ರಾರಂಭದಲ್ಲಿ ಮ. ರಾ. ಶಿಂಗೂರು ಮಾದಪ್ಪನವರು ಮ. ರಾ. ಸಾಹುಕಾರ್ ಡಿ. ನಾರಾಯಣ ಶೆಟ್ಟರು ಈ ದಿನದ ಸಭೆಗೆ ಅಧ್ಯಕ್ಷರಾಗಬೇಕೆಂತ ಸೂಚಿಸಿದರು. ಮತ್ತು ಮೆ. ಚವುಡ್ಲು ಕಾಳಪ್ಪನವರು ಅನುಮೋದಿಸಿದ ನಂತರ ಸಭಿಕರೆಲ್ಲರೂ ಒಪ್ಪಿದರು. ಮೆ. ನಾರಾಯಣಶೆಟ್ಟರು ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡು ಈ ದಿನದ ಸಭೆಯ ಉದ್ದೇಶ ಹಾಲಿ ಸರ್ಕಾರದವರು ರೈತರ ಅನ್‌ರಿಡೀಮ್ಡ್ ಜಾಗದ ಗಂಧದ ಮರಗಳಿಗೆ ಬೋನಸ್ ಕೊಡಲು ಏರ್ಪಡಿಸಿರುವ ನಂಬ್ರ 67 ತಾ. 28—6—35 ರ ಡ್ರಾಫ್ಟು ರೂಲ್ಸಿನ ಗುಣಾವಗುಣ ಚರ್ಚಿಸಿ ಅದನ್ನು ಚೀಫ್ ಕಮಿಷನರ್ ಸಾಹೇಬರವರಿಗೆ 25—9—35 ರೊಳಗೆ ಕಳುಹಿಸಬೇಕಾಗಿದೆಯೆಂತ ವಿವರಿಸಿದರು.

ಅಧ್ಯಕ್ಷರ ಅನುಮತಿಯಿಂದ ಸಭಿಕರಲ್ಲಿ ಮೆ. ಗಳಿಾದ ಡಿ ದಾಸಪ್ಪನವರು, ಚಾದ್ರಪ್ಪನವರು, ಕೆಳಗಿನ ಮನೆ ಸೋಮಯ್ಯನವರು, ಶಿಂಗೂರು ಮಾದಪ್ಪನವರು, ಈ ಡ್ರಾಫ್ಟು ರೂಲ್ಸಿನ ಪ್ರತಿಯೊಂದು ಐಟಂ ವಿವರವಾಗಿ ಚರ್ಚಿಸಿ ಪ್ರತಿಯೊಂದು ಐಟಮಿನಿಂದಲೂ ಬಾಧಕವೇ ಉಂಟಾಗುವಂತೆ ಇರುವುದರಿಂ ಈ ರೂಲ್ಸು ಪೂರಾ ವಜಾಮಾಡಬೇಕೆಂತ ಅಭಿಪ್ರಾಯಪಟ್ಟರು

ಮೆ. ನಿಡ್ತದ ಕಾಫಿಪ್ಲಾಂಟರ್ ಸುಬ್ಬಣ್ಣಯ್ಯನವರು ಈ ರೂಲ್ಸಿನ ಮೇಲೆ ಮಾತನಾಡಬೇಕೆಂತ ಅಧ್ಯಕ್ಷರು ಸೂಚಿಸಿದ ಮೇರೆ ಮೆ. ಸುಬ್ಬಣ್ಣಯ್ಯನವರು ಸಹ ಅವರ ಅಭಿಪ್ರಾಯವನ್ನು ತಮ್ಮ ಅನುಭವದ್ದಿಂದಲೂ, ರಿಕಾರ್ಡು ದಾಕ್ಲೆಗಳಿಂದಲೂ, ಉದಾಹರಣೆಗಳಿಂದಲೂ, ವಿವರಿಸಿದರು. ಈ ರೂಲ್ಸುಗಳಿಂದ ರೈತನಿಗೆ ತುಂಬಾ ತೊಂದರೆಯೇ ಸಂಭವಿಸುವದಾಗಿ ಕಾಣುತ್ತಿದೆಯೇ ಹೊರ್ತು ಲಾಭವೇನೂ ದೊರೆಯುವಂತಿಲ್ಲವೆಂತ ಹೇಳಿದರೆ ತಪ್ಪಾಗಲಾರದು ಎಂತ ಹೇಳಿದರು.

ಮೆ. ಕಾಫಿ ಪ್ಲಾಂಟರ್ ಗೋಪಾಲಪುರದ ಕಾಳೇಗೌಡರು ರೂಲ್ಸು ಪೂರಾ ಅನಾನುಕೂಲವಾಗಿದೆಯೆಂತ ಹೇಳುವುದರ ಬದಲು ಯಾವ ಐಟಂ ಬೇಡವೋ ಅಂಥವುಗಳನ್ನು ಮಾತ್ರ ತೆಗೆದುಹಾಕಬೇಕೆಂತ ಕೇಳುವದು ಒಳ್ಳೆಯದೆಂತಲೂ, ಆ ಬಗ್ಗೆ ಪುನಃ ಚರ್ಚಿಸಬೇಕಾಗಿಯೂ ಶೃತಪಡಿಸಿದ ಮೇರೆ ಕರಡು ನಿಬಂಧನೆಯ ಪ್ರತಿಯೊಂದು ಐಟಂ ಓದಿ ಅದಕ್ಕೆ ಪ್ರತಿಯಾಗಿ ಯಾವ ಯಾವ ಬೇರೆ ನಿಬಂಧನೆ ಸೇರಿಸಬೇಕೆಂತ ಸಭಿಕರನ್ನು ಕೇಳುವಾಗ ಪ್ರತಿಯೊಂದು ಷರತ್ತೂ ರೈತರಿಗೆ ಕಂಟಕರೂಪವಾಗಿಯೇ ಇರುವುದರಿಂದ ಅವುಗಳಲ್ಲಿ ಯಾವ ಷರತ್ತನ್ನೂ ಇಟ್ಟುಕೊಳ್ಳಲು ಆಗಲಾರದೆಂತ ಸರ್ವಾನುಮತದಿಂದ ಸೂಚಿಸಿ ಸದರಿ ಕರಡು ನಿಬಂಧನೆಗಳಿಗೆ ಬದಲಾಗಿ ನಮಗಳ ಅಭಿಪ್ರಾಯವನ್ನು ಒಂದು ಠರಾವು ಮೂಲಕ ತಿಳಿಸುವುದು ಉತ್ತಮವೆಂತಲೂ ಆ ಕರಡು ನಿಬಂಧನೆಗಳು ಪೂರಾ ವಜ್ಜವೇ ಆಗಬೇಕೆಂತಲೂ ಏಕಾಭಿಪ್ರಾಯಕ್ಕೆ ಬಂದು ಕೆಳಗೆ ಕಂಡ ಠರಾವನ್ನು ಸರ್ವಸಮ್ಮತದಿಂದ ತೀರ್ಮಾನಿಸಿದರು:—

1. 'ಹಾಲಿ ರೈತರ ರಿಡೀಮ್ಡ್ ಜಾಗಗಳಲ್ಲಿನ ಗಂಧದ ಮರಗಳಿಗೆ ಸರ್ಕಾರದವರು ಯಾವ ನಿರ್ಬಂಧವೂ ಇಲ್ಲದೆ ಶೇಕಡ 75% ರೂ. ನೂತ್ತೆರೀಫಾಡು ಕೊಡುತ್ತಾ ಇರುವಂತೆಯೇ ಅನ್‌ರಿಡೀಮ್ಡ್ ಜಾಗದ ಗಂಧಕ್ಕೂ ಪ್ರತಿಫಲ ಕೊಡಬೇಕು.' ಈ ಠರಾವನ್ನು ಮೆ. ಚವುಡ್ಲು ಕಾಳಪ್ಪನವರು ಸೂಚಿಸಿದರು ಮೆ. ಕೆ. ಚಂದ್ರಪ್ಪನವರು ಅನುಮೋದಿಸಿದರು.

2. (a) ಈ ಕರಡು ರೂಲ್ಸ್‌ಗಳ ಸಂಗತಿಯಲ್ಲಿ ಚೀಫ್ ಕಮಿಷನರ್ ಸಾಹೇಬರಲ್ಲಿ ಖುದ್ದಾಗಿ ಮಾತನಾಡಿ ಸಾಧಕ ಬಾಧಕ ವಿವರಿಸಲು ಆದಷ್ಟು ಜಾಗ್ರತೆ ಒಂದು ಡೆಪ್ಯುಟೇಶನ್ ಹೋಗಬೇಕೆಂತ ಮೆ. ಶೇಷಣ್ಣನವರು ಸೂಚಿಸಿದರು ಮೆ. ತಿಂಗೂರು ಮಾದಪ್ಪನವರು ಅನುಮೋದಿಸಿದ ನಂತರ ಸರ್ವಾನುಮತದಿಂದ ತೀರ್ಮಾನವಾಯಿತು. (b) ಈ ಡೆಪ್ಯುಟೇಶನ್‌ಗೆ ಈ ನಾಡಿನ ಪರವಾಗಿ ಕಾಫಿ ಪ್ಲಾಂಟರ್ ಮೆ. ಡಿ. ದಾಸಪ್ಪನವರನ್ನು ಸಭೆಯವರೆಲ್ಲರೂ ಚುನಾಯಿಸಿದರು.

3. ಡ್ರಾಫ್ಟು ರೂಲ್ ವಿಮರ್ಶೆಗೆ ಸರ್ಕಾರದವರು ಇಟ್ಟಿರುವ 90 ದಿನದ ಅವಧಿಯು ಆಗಲೇ ಆಖೈರಾಗುತ್ತಾ ಬಂದಿರುವದರಿಂದಲೂ, ಈ ಪ್ರಶ್ನೆಯು ಅತೀ ಪ್ರಾಮುಖ್ಯವಾದ್ದರಿಂದಲೂ ಆರು ತಿಂಗಳುಗಳ ವರೆಗಾದರೂ ಮುಂದರಿಸಿಕೊಡಬೇಕೆಂತ ಚೀಫ್ ಕಮಿಷನರ್ ಸಾಹೇಬರನ್ನು ಕೇಳಿಕೊಳ್ಳಬೇಕೆಂತ ಮೆ. ಡಿ. ದಾಸಪ್ಪನವರು ಸೂಚಿಸಿದನ್ನು ಮೆ. ಯನ್. ಶೇಷಣ್ಣನವರು ಅನುಮೋದಿಸಿದನಂತರ ಸಭೆಯವರೆಲ್ಲರೂ ಒಪ್ಪಿದರು.

4 ಇದೇ ಸೆಪ್ಟಂಬರ್ ತಿಂಗಳ ಕೊಡಗು ಗಜೆಟಿನಲ್ಲಿ ಪ್ರಕಟವಾಗಿರುವ 5 ಗಂಧದ ಮರಕ್ಕಿಂತ ಜಾಸ್ತಿ ಇರುವ ಜಾಗಗಳನ್ನು ಸಾಗುವಳಿಗೆ ಕೊಡಲು ಆಗುವುದಿಲ್ಲವೆಂತಲೂ, ಗಂಧದ ಮರಗಳ ಜೊತೆಗೆ ಫಾರೆಸ್ಟಿನವರು ಗೊತ್ತು ಮಾಡುವ ಆಸರೆ ಮರಗಳನ್ನು ಕಾಪಾಡಲು ರೈತನಿಂದ ಮುಚ್ಚಳಿಕೆ ಬರಸಿಕೊಳ್ಳಬೇಕೆಂತ ವಗೈರೆ ತಿದ್ದುಪಡಿ ಮಾಡಲ್ಪಟ್ಟ ನಂಬ್ರ 85 ತಾ. 10—8—35ರ ಡ್ರಾಫ್ಟು ಇಸ್ತಿಹಾರು ಸಹ ರೈತನಿಗೆ ತೊಂದರೆಯಾಗುವಂಥಾದ್ದಾದ್ದರಿಂದ ಜಾರಿಗೆ ಬರಕೂಡದೆಂ. ಮೆ. ಚವುಡ್ಲು ಕಾಳಪ್ಪನವರು ತಂದ ಠರಾವನ್ನು ಮೆ. ಕಳ್ಳಿ ಮೊಗಪ್ಪನವರು ಅನುಮೋದಿಸಿದ ನಂತರ ಸಭೆಯವರೆಲ್ಲರೂ ಮಂಜೂರು ಮಾಡಿದರು.

5 ದೇಶೀಯರಿಂದ ಚುನಾಯಿಸಲ್ಪಟ್ಟ ಖಾಸಗಿ ಮೆಂಬರುಗಳ ಹೆಚ್ಚು ಸಂಖ್ಯೆಯುಳ್ಳ ಒಂದು ನಾನ್ ಅಫೀಷಿಯಲ್ ಟೂರಿಂಗ್ ಕಮಿಟಿಯನ್ನು ಏರ್ಪಡಿಸಿ ಅದರ ಮೂಲಕ ನಿರ್ಧರಿಸಿ ಗಂಧದ ಮರದ ಯಾವ ರೂಲನ್ನಾದರೂ ತಯಾರಿಸಬೇಕೆಂತ ಮೆ. ಯನ್. ಶಂಕರಯ್ಯನವರು ಸೂಚಿಸಿ, ಬೆಟ್ಟದಪುರ ಮೆ. ರುದ್ರಪ್ಪಶೆಟ್ಟರು ಅನುಮೋದಿಸಿದ ನಂತರ ಸರ್ವಾನುಮತದಿಂದ ತೀರ್ಮಾನವಾಯಿತು.

6. ಈ ದಿನದ ಠರಾವುಗಳೆಲ್ಲವನ್ನೂ ಹು. ಚೀಫ್ ಕಮಿಷನರ್ ಸಾಹೇಬರಿಗೂ, ಕಮಿಷನರ್ ಸಾಹೇಬರಿಗೂ ಚೀಫ್ ಫಾರೆಸ್ಟರಿಗೂ ಮೆ. ಚವುಡ್ಲು ಕಾಳಪ್ಪನವರು ಕಳುಹಿಸಿಕೊಡಬೇಕೆಂತ ಸರ್ವಾನುಮತದಿಂದ ತೀರ್ಮಾನವಾಯಿತು.

7. ಈ ದಿನದ ನಡವಳಿಕೆಗಳೆಲ್ಲವನ್ನೂ 'ಕೊಡಗು' ಮತ್ತು 'ಜನ್ಮಭೂಮಿ' ಪತ್ರಿಕೆಗಳಿಗೆ ಕಳುಹಿಸಬೇಕಾಗಿ ಮೆ. ಚವುಡ್ಲು ಕಾಳಪ್ಪನವರು ಸೂಚಿಸಿದನ್ನು ಸಭಿಕರೆಲ್ಲರೂ ಒಪ್ಪಿದರು

ಡಿ. ನಾರಾಯಣಶೆಟ್ಟಿ,
(ಅಧ್ಯಕ್ಷ)

ಗಂಧದ ಮರಗಳಿಗೆ ಬೋನಸು.

ತಾ 30—8—35 ರ 'ಕೊಡಗು' ಪತ್ರಿಕೆಯಲ್ಲು ಖಾಸಗಿ ಜಾಗದಲ್ಲು ಬೆಳದಿರುವ ಯಾ ಬೆಳಸುವ ಗಂಧದ ಮರಗಳಿಗೆ ಬೋನಸು ಕೊಡಲು ಸರಕಾರದವರು ಆಲೋಚನೆ ಪಟ್ಟು ತಯ್ಯಾರಿಸಿರುವ ಕರಡು ನಿಬಂಧನೆಗಳನ್ನು ಮತ್ತು ಅಭಿಪ್ರಾಯಗಳನ್ನು ಜನರ ತಿಳವಳಿಕೆ ಬಗ್ಯೆ ಪ್ರಕಟಿಸಿರುವದನ್ನು ಓದಿದರೆ 'ಹೋಗದ ಊರಿಗೆ ದಾರಿ ಯಾವದು' ಎಂಬದಾಗಿ ಕೇಳುವವನ ಮನೋಭಿಪ್ರಾಯದಂತೆ ಕಂಡು ಬರು

ಉದಾರ ಮನಸಿನಿಂದ ಅಲ್ಪ ಸ್ವಲ್ಪ ರಿಯಾಯಿ ಈ ಮೊದಲೇ ಕೊಡುತ್ತಾ ಬಂದಿದ್ದರೆ ಇಷ್ಟರ ವರೆಗೆ ಬೆಳೆಯುವ ಜಾಗದಲ್ಲಿ ಗಂಧದ ತೋಟವೇ ಆಗುತಿತ್ತು. ಫಾ ಉತ್ತಮವಾದ ಅಭಿಪ್ರಾಯಗಳನ್ನು ಬಟ್ಟು ತಮ್ಮ ಬೊಕ್ಕಸ್ನೇ ತುಂಬಿಸಿಕೊಳ್ಳಬೇಕೆಂಬ ಆಲೋಚನೆಯಿಂದ ಕಮಿಷನರಾಗಿದ್ದ ಮೆ. ಹ್ಯಾರಿಸ್‌ರವರು ಮತ್ತು ಫಾರೆಸ್ಟ್ ಮುಖ್ಯಾಧಿಕಾರಿಗಳಾಗಿದ್ದ ಟಿಯರ್ ಮ್ಯಾನರವರು ಖಾಸಗಿ ಜಾಗದಲ್ಲಿ ಇದ್ದ ಗಂಧದ ಮರಗಳ ಎಣಿಕೆ ಮಾಡಿಸಿದ್ದಲ್ಲದೆ ಅವುಗಳ ಸುತ್ತಲೂ ಕಾಡು ತೆಗಿಯಬೇಕೆಂತಲೂ, ಹಾಗೆ ತೆಗೆಯದೆ ಕಾಡು ಬೆಂಕಿಯಿಂದ ಆಕಸ್ಮಾತು ಬೆಂದು ಹೋದರೆ ಮಾಲೀಕರು ನಷ್ಟ ಕೊಡಬೇಕೆಂತಲೂ ಹೇಳಿ ಅನೇಕರನ್ನು ತೊಂದರೆಪಡಿಸಿದರು. ಆ ತೊಂದರೆಯನ್ನು ಅನುಭವಿಸಿದ ಮತ್ತು ಕಂಡು ಕೇಳಿದ ಮಾಲೀಕರು ಅಂದು ಮೊದಲುಗೊಂಡು ಇಂದಿನ ವರೆಗೆ ತಮ್ಮ ಜಾಗಗಳಲ್ಲಿ ಗಂಧದ ಮರಗಳನ್ನು ಬೆಳೆಯಗೊಡುವದು ಅನುಚಿತವೆಂಬದನ್ನು ಮರೆತಿಲ್ಲ.

ಒಂದು ಶತಮಾನದಿಂದಲೂ ಖಾಸಗಿ ಜಾಗದಿಂದ ಕಿತ್ತು ತೆಗೆದುಕೊಂಡು ಹೋದ ಮರಗಳಿಗೆ ಏನೊಂದು ರಿಯಾಯಿತಿಯನ್ನು ಕೊಡದೆಯೂ, ಇತ್ತೀಚಿಗೆ ತಾನಾಗಿ ಸಾಯುವದಕ್ಕೆ ಮುಂಚಿತವಾಗಿ ಚೆನ್ನಾಗಿ ಬೆಳೆಯದ ಮರಗಳನ್ನೂ ಕೂಡ ಮನಬಂದಂತೆ ಕಿತ್ತು ಈಗ ಪೂರೈಸುತ್ತಾ ಬಂದಿದ್ದರೂ ಇಷ್ಟಕ್ಕೆ ತೃಪ್ತರಾಗದ ಅಧಿಕಾರಿಗಳು ಇನ್ನೂ ಕೀಳಲಿಕ್ಕೆ ಲಾಯಕ್ಕಾದ ಮರಗಳೇನಾದರೂ ಬಾಕಿಯಾಗಿದ್ದರೆ ಅವುಗಳನ್ನು ಕಿತ್ತುಕೊಳ್ಳುವ ಯೋಚನೆಯಿಂದ ಬೋನಸನ್ನು ಕೊಡುವ ಅವಧಿಯನ್ನು ಮುಂದೊತ್ತುತ್ತಾರೆಂಬದನ್ನೂ, ಅದಕ್ಕನುಗುಣವಾಗಿ ಅಂಥಾ ಮರಗಳೇನಾದರೂ ಇದ್ದರೆ ಸುಲಭವಾಗಿ ಕಂಡು ಹಿಡಿದುಕೊಳ್ಳಲು ರೂಲ್ 3 ರಲ್ಲು ಹೇಳುವ ಶರತ್ತುಗಳು ಧೃಢಿಕರಿಸುತ್ತವೆ.

ರೂಲ್ಸ್ ಮತ್ತು ನಿಬಂಧನೆಗಳನ್ನೆಲ್ಲ ಚೆನ್ನಾಗಿ ಪರಿಶೀಲನೆ ಮಾಡಿದರೆ ಉದಾರ ಮನಸ್ಸಿನಿಂದ ಬೋನಸನ್ನು ಕೊಡಲು ಇಷ್ಟಪಟ್ಟಿರುವಂತೆ ಕಾಣದು ಬಾರದ್ದರಿಂದ ಬೋನಸನ್ನು ಪಡೆಯುವದು ಸಾಧ್ಯವಲ್ಲವೆಂಬದು ವ್ಯಕ್ತವಾಗುತ್ತೆ.

ಸರಕಾರಕ್ಕೂ ಮಾಲೀಕರಿಗೂ ಅನ್ಯೋನ್ಯ ಪ್ರೀತಿ ಭಾವದಿಂದ ಉತ್ಪತ್ತಿಯನ್ನು ಹೆಚ್ಚಿಸಿಕೊಳ್ಳುವಂತೆ ಮಾಡಬೇಕೆಂಬ ದೃಢಸಂಕಲ್ಪವಿಟ್ಟು ಬೋನಸನ್ನು ಕೊಡಬೇಕೆಂಬ ಖಂಡಿತವಾದ ಮನಸ್ಸುಳ್ಳವರಾದರೆ ಯಾವದೊಂದು ಶರತ್ತೂ ರೂಲ್ಸ್‌ಗಳೂ ಇಲ್ಲದೆ ಇಂದಿನಿಂದಲೆ ಖಾಸಗಿ ಜಾಗದಲ್ಲಿ ಕೀಳುವ ಮರಗಳಿಗೆ ತೂಕದ 4 ರಲ್ಲಿ ಒಂದು ಭಾಗವನ್ನು ಖರ್ಚಿಗಾಗಿ ಇಟ್ಟುಕೊಂಡು ಉಳಿದ ಭಾಗದಲ್ಲಿ ತಯಾರು ವರ್ಷ ಮಾರಾಟ

...ದಿ ಸಿಕ್ಕುವ ಉತ್ಪತ್ತಿಯ ¼ ಭಾಗವನ್ನು ಕೊಡುವಂಥಾ ...ಗಳನ್ನು ಇಂದೇ ಇಂದು ಕಲ್ಪಿಸಿ ಜನರಲ್ಲಿ ಮರಗ ಬೆಳೆಸಲೂ ಅಥವ ಬೆಳೆದಿರುವ ಮರಗಳನ್ನು ರಕ್ಷಣೆ ಮಾ ...ೂ ಪ್ರೋತ್ಸಾಹಕೊಡುವದಕ್ಕಿಂತ ಉತ್ತಮವಾದ ಸಲಹೇ ...ಂದು ಇರಲಾರದು.

'ಸುಟ್ಟವನು ಮರೆತರೂ ಸುಡಿಸಿಕೊಂಡವನು ಮರೆಯು ...ಲ್ಲ'ವೆಂಬದನ್ನು ಅಧಿಕಾರಿಗಳು ಇನ್ನಾದರೂ ಮನಸ್ಸಿಗೆ ತೆ ...ಕೊಂಡು ಒಳ್ಳೆ ಅಭಿಪ್ರಾಯದಿಂದ ತಾನಾಗಿ ಬೆಳೆಯುವ ...ಗಳನ್ನು ರಕ್ಷಣೆ ಮಾಡುವಂತೆಯೂ, ಬೀಜಗಳನ್ನು ಬಿತ್ತಿ ...ನುಕೂಲದಲ್ಲಿ ಇದರಿಂದ ಲಾಭವನ್ನು ಪಡೆದೇವೆಂಬ ...ೕಕ್ಷಣೆ ಹುಟ್ಟಿ ನಿರ್ಧಿಷ್ಟವಾಗಿ ಬೆಳೆಸಲು ಪ್ರೋತ್ಸಾಹಿಸುವಂತೆ ...ಖಂಡಿತವಾದ ಮತ್ತು ನಂಬಿಗೆಗೆ ಅರ್ಹತೆವುಳ್ಳ ಜಾಹೀ ...ಗಳನ್ನು ಹೊರಡಿಸಿ ರೈತರ ನಂಬಿಕೆಗೆ ಪಾತ್ರರಾಗದೆ ಹೋ ...ಂದು ಶತಮಾನದ ಆಳ್ವಿಕೆಯಿಂದ ಗಂಧದ ಮರಗಳಿಂದ ...ನು ಶಾಸನವನ್ನು ಪಡೆಯದ ಮಾಲೀಕರು ಇಂಥಾ ನಿಬಂಧನೆ ...ಳ್ಳ ಕಟ್ಟು ಕಟ್ಟಳೆಗಳನ್ನೆಲ್ಲಾ ಇಟ್ಟುಕೊಂಡು ಬೋನಸನ್ನು ...ಡುವದಾಗಿ ಹೇಳುವ ಸರಕಾರದವರ ಅಭಿಪ್ರಾಯಕ್ಕೆ ಒಳ ...ಗಿ ಮುಂದೆ ಬರಲಾರರೆಂಬದು ಖಂಡಿತ.

ಒಂದು ಶತಮಾನದ ಇವರ ಆಳ್ವಿಕೆಯಿಂದ ಹಿಂದಿಯರಾ ...ಮ್ಮ ಮೂಲಭೂತ ಹಕ್ಕುಗಳೆಲ್ಲ ಒಂದೊಂದಾಗಿ ಎಲ್ಲ ...ಮಾಯವಾದವು. ದೇಶದ ಹುಟ್ಟುವಳಿಯೂ, ಜನರ ಸು ...ಸಂಪತ್ತು ಕಡಿಮೆಯಾಗುತ್ತಾ ಬರುತ್ತಿದೆ. ಸ್ವತಂತ್ರ ರಾ ...ಗಳ ಜನರು ಐಶ್ವರ್ಯದಿಂದಲೂ, ಆರೋಗ್ಯದಿಂದಲೂ ಕೂ ...ವರಾಗಿರುವಾಗ್ಗೆ ಪರಾವಲಂಬಿಗಳಾದ ನಾವಾದರೋ ...ಟ್ಟೆಗೂ ಬಟ್ಟೆಗೂ ಸಾಕಷ್ಟು ಉತ್ಪತ್ತಿಗೆ ದಾರಿ ಇಲ್ಲದೆ ಅ ...ರೋಗ್ಯದಿಂದ ಪೀಡಿತರಾಗಿ ಯಮಪುರಿಯನ್ನು ಮುಟ್ಟಿಗೆ ...ಲು ಸಮಯಕಾಯುತ್ತಲಿದ್ದೇವೆ. ಈ ಸ್ಥಿತಿಯಲ್ಲಿರುವ ...ಗೆ ನಮ್ಮ ಜಾಗದಲ್ಲಿ ಬೆಳೆದಿರುವ ಗಂಧದ ಮರಗಳಿಗೆ ...ವ ಉತ್ಪತ್ತಿಯ ¼ ಭಾಗವನ್ನು ಕೊಡಲು ಹಿಂದೂ ಮುಂ ...ಯೋಚನೆ ಮಾಡುವದರಲ್ಲಿ ಇದ್ದರೆ ಅಲ್ಲದೆ, ಖಾಸಗಿ ...ಗಗಳಲ್ಲಿ ಸತ್ತ ಅಥವ ಪೂರ್ಣ ಬೆಳೆದ ಜಾತಿ ಮರಗಳು ಇ ...ಅವುಗಳನ್ನು ಮಾರಾಟ ಮಾಡಲು ಮಾಲೀಕನು ಅಪೇಕ್ಷಿ ...ರೆ, ಅದಕ್ಕು ಹೆಚ್ಚು ಕಮ್ಮಿ ¼ ಭಾಗವನ್ನು ಕ್ರಯ ಸರಕಾ ...ಕೊಟ್ಟೇ ಕೊಡಬೇಕು. ಈ ರೀತಿ ಕಾನೂನು ಕಾಯಿ ...ರಿಂದ ಬಂಧಿಸಲ್ಪಟ್ಟಿರುವ ರಾಜ್ಯಭಾರದಲ್ಲಿ ಜನಸಾಮಾನ್ಯ ...ಸುಖ ಸಂಪತ್ತಿನಿಂದ ಬಾಳ್ವೆ ಮಾಡುವ ಬಗೆ ಹೇಗೆ ಎಂಬ ...ಗೊತ್ತಾಗುವದಿಲ್ಲ.

...ೋಣಿಕೊಪ್ಪ, 'ಕೆ. ಸಿ'

ಭಾರತದ ಮುಂದಿನ ಜನಾಂಗದ ಆರೋಗ್ಯ ಮತ್ತು ಕ್ಷೇಮ ವರ್ಧನೆಯು ಇಂದಿನ ಅನೇಕ ರಾಜ ಕೀಯ ಮತ್ತು ಸಾಮಾಜಿಕ ಮುಂದಾಳುಗಳ ದೃಷ್ಟಿ ಯಲ್ಲಿರುವ ಒಂದು ದೊಡ್ಡ ಸಮಸ್ಯೆಯಾಗಿರುತ್ತದೆ. ನಮ್ಮ ಮಕ್ಕಳ ದೇಹವು ಪುಷ್ಟಿಯಾಗಿಯೂ ಸುದೃಢ ...ಗಿಯೂ ಇರಲಿಕ್ಕೆ ಬೇಕಾದ ಒಂದು ಅಪೂರ್ವ ...ಸಂಜೀವಿನಿಯನ್ನು ಎಲ್ಲರೂ ತಿಳಿದದ್ದಾಗಿದ್ದರೆ ...ಚಾರವು ಇಷ್ಟು ಕಠಿಣತರದ್ದಾಗಿರುತ್ತಿದ್ದಿಲ್ಲ. ಜೀವನಿಯಂತಿರುವ ಔಷಧವನ್ನು ಹೆಚ್ಚು ಸಫ ...ದ ಅನೇಕರು ಭಾರತದ ಉದ್ದಗಲಕ್ಕೂ ... 50 ವರ್ಷಗಳಿಂದ ಉಪಯೋಗಿಸುತ್ತಲಿರುವರು ...ಇವು ಹೆಚ್ಚು ಕೃಶವಾಗಿ, ನಿರ್ಬಲತೆಯಿಂದ ಕೂಡಿ ...ಹಾಳನ್ನು ಸಹ ಜೀರ್ಣಿಸಿಕೊಳ್ಳಲಶಕ್ತವಾಗಿ, ಅಗಿಂ ...ದ್ರಾಗ್ಯೆ ಶೀತ, ಕೆಮ್ಮು ಮೊದಲಾದ ರೋಗಗಳಿಗೀಡಾ ...ಗಿ ... ಬಿಡನೆ ಪ್ರಸಿದ್ಧಿ ಹೊಂದಿರುವ

ಡೋಂಗರೆ ಬಾಲಾಮೃತವನ್ನು

ಕೊಡಬೇಕು. ಡೋಂಗರೆ ಬಾಲಾಮೃತವು ಒಂದು ಟಾನಿಕ್. ಎಲ್ಲೆಡೆಗಳಲ್ಲೂ ದೊರೆಯುವುದು.

ಪ್ರೊಪ್ರಾಯಿಟರ್ಸ್—

...ಟಿ. ಡೋಂಗರೆ ಕಂಪೆನಿ,

(52-31) ಗಿರಿಗಾಂವ್, ಬೊಂಬಾಯಿ.

ಸೆಲ್ಫ್ ಇಂಗ್ಲಿಷ್ ಸ್ಟಡಿ.



ಕನ್ನಡ ಓದಲಿಕ್ಕೆ ತಿಳಿದವರು ಒಬ್ಬರ ಸಹಾಯವಿಲ್ಲದೆ ಇಂಗ್ಲಿಷ್ ಓದುವುದನ್ನೂ, ಬರೆಯು ವುದನ್ನೂ, ಮಾತಾಡುವುದನ್ನೂ, ಇಂಗ್ಲಿಷಿನಲ್ಲಿ ಪತ್ರವ್ಯವಹಾರ ಮಾಡು ವುದನ್ನೂ 2 ತಿಂಗಳಲ್ಲಿ ಕಲಿತುಕೊ ಳ್ಳಬಹುದು. ಇಂಥ ಪುಸ್ತಕವನ್ನು ಇದುವರೆಗೆ ಯಾರೂ ತಯಾರಿಸಲಿಲ್ಲ. 884 ಪೇಜುಗಳ ದೊಡ್ಡ ಪುಸ್ತಕ. ಸ್ವಲ್ಪ ಪ್ರತಿಗಳು ಮಾತ್ರ ಇರುವುವು. ಬೇಗನೇ ಬರೆಯಿರಿ.

ಕ್ರಯ ಪುಸ್ತಕ 1ಕ್ಕೆ ರೂ. 2.

METHA & Co,
11 Peryanayakaran Street,
12—7 G. T. Madras

ರೋಲ್ಡ್ ಗೋಲ್ಡ್ ರಿಸ್ಟ್ ವಾಚ್.

ಈ ಗಡಿಯಾರಗಳು ಬಹು ಪ್ರಖ್ಯಾತಿ ಯಾದ ಲೀವರ್ ಮೂವ್‍ಮೆಂಟ್ಸುಗಳಿಂದ (ಸ್ವಿಸ್ ಮೇಡ್) ತಯಾರಿಸಿವೆ. ಇವು ಖರ ರು ಗಂಟೆಯನ್ನು ತೋರಿಸುವುವು. ಒಳ ಗಡೆ ಕೆಂಪು ಇಟ್ಟರುವುದು, ಇದರ ಕೇಸು ಭಂಗಾರಕ್ಕೆ ಸರಿಯಾಗಿದೆ. ಈ ಗಡಿಯಾ ರಗ್ಳಿಗೆ 5 ವರ್ಷ ಖಾತ್ರಿಯಾದ ಗ್ಯಾರಂಟಿ ಕೊಡುವೆವು. ಕ್ರಯ 1ಕ್ಕೆ 5—8—0.

METHA & CO.
11 Peryanayakaran Street.
12—7 G. T. Madras.

ಧಾತುಪುಷ್ಟಿ ಲೇಹ.

ಸ್ವರ್ಣ ಕಲ್ಪದ ಸಾಲಾಮಿಶ್ರಿ ಮಿಶ್ರಿತ.

ಇದು ಎಲಹೀನರಿಗೆ ಅದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ ಹೋಗುವಿಕೆ, ಸೊಂಟ ನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ, ಇವುಗಳನ್ನೆಲ್ಲಾ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯು, ಸಂಭೋಗ ಶಕ್ತಿಯನ್ನು ಮತ್ತು ಜ್ಞಾಪಕ ಶಕ್ತಿಯನ್ನು ವೃದ್ಧಿ ಮಾಡುವುದು. ಶರೀರಕ್ಕೆ ಆರೋಗ್ಯವನ್ನೂ ದಿವ್ಯ ಶಕ್ತಿಯನ್ನೂ, ಕಾಂತಿಯನ್ನೂ, ಉಂಟುಮಾಡುವುದು.

ಡಬ್ಬಿ 1ರ ರೂ. 2—8—0. 3ಕ್ಕೆ ರೂ. 7—0—0.

ಮಲೇರಿಯಾ ನಿವಾರಿಣಿ.

ಮಲಬದ್ಧತೆ, ಚಳಿಜ್ವರ, ದಿನದಿಟ್ಟು ಬರುವ ಜ್ವರ, ಚಾತುರ್ಥಿಕ ಜ್ವರ, ಗೆಡ್ಡೆ ಬಂದ ಜ್ವರ, ಪುರಾಣ ಜ್ವರ, ವಾಯಿದೆ ಜ್ವರ, ಇನ್‍ಫ್ಲುಯೆಂಜಾ, ನಿಮೋನಿಯಾ ಜ್ವರ, ಕಫ ಜ್ವರ, ಪಳಜ್ವರ, ಇವುಗಳನ್ನೆಲ್ಲಾ ಹೋಗಲಾಡಿಸಿ ಶಕ್ತಿಯನ್ನುಂಟುಮಾಡುವದು.

ಬಾಟ್ಲಿ 1ರ ರೂ. 1—8—0. ಸಣ್ಣ ಬಾಟ್ಲಿಗೆ 0—13—0.

ಮೇಹ ಕುಠಾರ.

ಪ್ರಮೇಹ, ಮೂತ್ರ ಕೃಚ್ಛ, ಮೂತ್ರ ಹೋಗುವಾಗ, ಉರಿ, ಮೂತ್ರ ದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಮೂತ್ರ ಆಗಾಗ ಬಂದು ಕಡೆಯಲಿಕ್ಕೆ ಸಾಧ್ಯವಿಲ್ಲದಿರುವಿಕೆ, ಇವೇ ಮೊದಲಾದ ಮೂತ್ರ ಕೋಶದ ರೋಗಗಳಿಗೆ ದಿವ್ಯ ಔಷಧ.

ಡಬ್ಬಿ 1ರ ರೂ. 2—8—0. 3ಕ್ಕೆ ರೂ. 7—0—0.

ಬಾಲಗ್ರಹ ಗುಟಿಕೆ—ಮಕ್ಕಳ ಎಲ್ಲಾ ಕಾಯಿಲೆಗಳಿಗೂ ರಾಮಬಾಣ.

ದ್ರಾಕ್ಷಾರಿಷ್ಟ—ಬಾಟ್ಲಿ 1ರ ರೂ. 2—0—0. ಅರ್ಧ ಬಾಟ್ಲಿಗೆ ರೂ. 1—2—0.

ಚವನ ಪ್ರಾಶ್ಯ—ಡಬ್ಬಿ 1ರ 2—8—0. ಅರ್ಧಕ್ಕೆ ರೂ. 1—5—0.

ಅಶೋಕಾರಿಷ್ಟ—ಬಾಟ್ಲಿ 1ರ ರೂ. 1—0—0.

(ಕೆಟಲಾಗ್ ಧರ್ಮಾರ್ಥ.) **ಎಂ. ಗಣಪಯ್ಯ ಎಂಡ್ ಸನ್ಸ್,**

ಆಯುರ್ವೇದಿಕ್ ಫಿಜಿಶಿಯನ್ಸ್. ರಥಬೀದಿ, ನಂಬರು 1, ಮಂಗಳೂರು.

ನಮ್ಮ ಔಷಧಿ ಸಿಕ್ಕುವ ಸ್ಥಳ:-
(1) ಎ. ಬಿ. ಕಾಮತ್. ಮಹದೇವಪೇಟೆ, ಮಡಿಕೇರಿ (ಕೊಡಗು).
(2) ಎ.ಎಸ್. ಮಾಚಯ್ಯ, ಬಟ್ಟೆ ವ್ಯಾಪಾರಿ, ಸುಂಟಿಕೊಪ್ಪ.
(3) ಮೆಸರ್ಸ್ ಕಾಮತ ಎಂಡ್ ಕೊ, ತಾರಾ ಹೌಸ್ ಗಿರಿಗಾಂವ್ ಬೇಕ್‍ರೋಡ್, ಬೊಂಬಾಯಿ ನಂ. 4.
52—11 (4) ಮೆಸರ್ಸ್ ಮುಲ್ಲರ್ ಪೇಟೆನ್ ಬ್ರದರ್ಸ್, 91, ಚಿಕ್ಕಪೇಟೆ, ಬೆಂಗಳೂರು ಸಿಟಿ.

GOVERNMENT SOAP FACTORY,

Bangalore.

ವಿಶ್ವಾಸಾರ್ಹತೆ.

ಅತ್ಯುತ್ತಮವಾದ ಟಾಯಿಲೆಟ್ ಸಾಬೂನಿನಲ್ಲಿ ಯಾವ
ಯಾವ ಗುಣಗಳು ಅವಶ್ಯಕವೆಂದು ನೀವು
ತಿಳಿದಿರುತ್ತೀರೋ ಆ ಗುಣಗಳೆಲ್ಲಾ
ಮೈಸೂರು ಸ್ಯಾಂಡಲ್ ಸಾಬೂನಿನಲ್ಲಿವೆ.

ನಾವು ನಿಮಗೆ ಭರವಸೆಯನ್ನೀಯುತೇವೆ.

ಎಲ್ಲಾ ಕಡೆಯಲ್ಲಿಯೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,

52—30 ಬೆಂಗಳೂರು.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೋಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲು)

		ರೂ.
ಶೇರ್ ಬಂಡವಾಳ	—	50,000— 0—0
ವಸೂಲಾದ ಶೇರ್ ಮೊಬಲಗು	—	36,030— 0—0
ಜಮೂಬಂದ ಠೇವಣಾತಿ	—	2,48,305—14—8
ವಸೂಲಾದ ಕ್ಷೇಮನಿಧಿ	—	94,623— 6—0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 4-8-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟರು, ಪಂದ್ಯಂಡ ಐ. ಬೆಳ್ಯಪ್ಪನವರು.

ಟ್ರೆಜರರ್ ರಾ. ಸಾ. ಪಾಂಡಂಡ ಚಂಗಪ್ಪನವರು,

ಸೆಕ್ರೆಟರಿ
ಮನೆಯಪ್ಪಂಡ ಬೆಳ್ಯಪ್ಪನವರು.

ತಾರೀಕು 1–9–1935.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲುಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಸಬ್ ಏಜೆಂಟರುಗಳು.

ವಿರಾಜಪೇಟೆ—ಮೆ. ಮಂಡೇಪಂಡ ಸೋಮೈಯ್ಯನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಯ್ಯನವರು
ಹುದಿಕೇರಿ & ತಿತಿಮತ್ತಿ—ಮೆ. ಜಿ. ಮಾದಯ್ಯನವರು.
ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಮಾಚಯ್ಯನವರು,
ಸೋಮವಾರಪೇಟೆ—ಮೆ. ಕೆ. ಮೊಗಪ್ಪನವರು
ನಾಪೋಕ್ಲು—ಮೆ, ಬೆಳ್ಳಿಪಂಡ ಯಂ, ಪೂಣಚ್ಚನವರು,
(ನಾಪೋಕ್ಲು ಸ್ಟೋರ್ಸ್)

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್.
ಮಡಿಕೇರಿ,

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರಿ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮಪ್ರಕಾರ ನಡಿಸಲು ಅತ್ಯವಶ್ಯವಾಗಿರುವ, ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ಖರಾರು ಫಾರಮುಗಳೂ, ಜಮ್ಮ ಮಂಜೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು ಖರಾರು ಫಾರಮುಗಳೂ, ಸ್ಟೋರ್ ಕೀಪರ್ ಖರಾರು ಫಾರಮುಗಳೂ ಓವಚರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜಮಾ ಖರ್ಚಿನ ರಿಜಿಸ್ಟರ್ ಪುಸ್ತಕಗಳೂ, ಮತ್ತು ಚೆಕ್ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಆಗದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮೇನೇಜರ್
"ಕೊಡಗು, ಲಿಮಿಟೆಡ್,
ಮಡಿಕೇರಿ,

EMPIRE OF INDIA LIFE ASSURANCE CO., LTD.

ANNOUNCEMENT.

All our policyholders in Coorg are hereby informed that to give facilities to them to pay their premiums etc., we have made arrangements with the Canara Banking Corporation, Udipi, Ltd., Mercara and Virarajendrapet to receive premiums etc., on our behalf at par and our policyholders may therefore pay their premiums etc., to them to save remittance charges.

Branch Secretary,
EMPIRE OF INDIA LIFE ASSURANCE CO., LTD.,
152/3, Commercial Street Bangalore.

52—46

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಜೀವ ವಿಮೆ ಕಂಪೆನಿ ಲಿಮಿಟೆಡ್.

(೧೮೭೪ರಲ್ಲಿ ಇಂಡಿಯಾದಲ್ಲಿ ಸ್ಥಾಪನೆಯಾದದ್ದು) (ಹೆಡ್ ಆಫೀಸು—ಬೊಂಬಾಯಿ.

1934ನೇ ಇಸವಿಯ ಕಂಪೆನಿಯ ಕೆಲಸದ ಫಲಿತಾಂಶ—

ಹೊಸ ಪಾಲಿಸಿಗಳ ಪ್ರಿಮಿಯಂ	ರೂ.	7,62,42,761
ವಾರ್ಷಿಕ ಉತ್ಪತ್ತಿ	ರೂ.	3,14,01,970
ಚಾಲ್ತಿಯಲ್ಲಿರುವ ಒಟ್ಟು ಪಾಲಿಸಿಗಳು	ರೂ.	54,20,38,518
ಕ್ಲೇಯಿಮ್ಸ್‌ಗಳಿಗೆ ಕೊಟ್ಟ ಒಟ್ಟು ಹಣ	ರೂ.	16,29,88,814
ಫಂಡ್ಸ್ ಹೆಚ್ಚಿದ್ದು	ರೂ.	15,53,88,843

ಈ ಮೇಲಿನ ಫಲಿತಾಂಶಗಳು 'ಓರಿಯಂಟಲ್' ಕಂಪೆನಿಯ ಸುಸಂಘಟನೆಯನ್ನೂ ಮತ್ತು ಪ್ರಸಿದ್ಧಿಯನ್ನೂ ವಿಷದಗೊಳಿಸುತ್ತವೆ.

ಈ ಪ್ರಸಿದ್ಧಿಗೊಂಡಿರುವ ಮತ್ತು ಅಭಿವೃದ್ಧಿಯಲ್ಲಿರುವ ಇಂಡಿಯನ್ ಜೀವ ವಿಮಾ ಕಂಪೆನಿಯಲ್ಲಿ ವಿಮೆ ಇಳಿಸಲು ತಾವಕಾಶ ಮಾಡಬೇಡಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಮೇನೇಜರ್, ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಲಿಕೋಟೆ	ಕರಾಚಿ	ಮೊಂಬಾಸ	ರಂಗೂನು
ಅಹ್ಮದಾಬಾದು	ಕಲ್ಕತ್ತಾ	ಕೌಲಾಲಂಪೂರು	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಕೊಲಂಬೊ,	ಲಾಹೋರ್	ಪಾಟ್ನ	ಸಿಂಗಪುರ
ಅಲ್ಲಾಹಾಬಾದು	ಡಕ್ಕಾ	ಲಕ್ನೊ	ಪೂನ	ಸುಕ್ಕೂರು
ಅಂಬಾಲಾ	ಡೆಲ್ಲಿ	ಮದ್ರಾಸು	ರಾಯಿಪುರ	ತಿರುಚಿನಾಪಳ್ಳಿ
ಬಳ್ಳಾರಿ	ಗೌಹತಿ	ಮಂಡಲೆ	ರಾಜಶಾಹಿ	ತಿರುವೆಂಡ್ರಮ್
ಬರೇಲಿ	ಜಲಗಾಂ	ಮಡಿಕೇರಿ	ರಾಂಚಿ	ವಿಶಾಖಪಟ್ಣ
ಕೊಯಂಬುತ್ತೂರು	ಗುಂಟೂರು	ಜಲ್‌ಪೇಗುರಿ	ಜಬ್ಬಲ್‌ಪುರ	ಮಧುರೆ & ಮೈಸೂರು

ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೇರೇಡ್, ಬೆಂಗಳೂರು.

52—38

ಯಂ. ವಿ. ಮುತ್ತುಕೃಷ್ಣ ನಾಯುಡು,
(ಬ್ರಾಂಚ್ ಸಕ್ರೆಟರಿ.)

ಶಿಕಾರಿಗೆ ಬೇಕಾಗುವ ನಾನಾ ವಿಧದ

ಕೋವಿ, ರೈಫಲು, ರಿವಾಲ್ವರು, ತೋಟಾಗಳು, ಬೇಟೆಯಾಡಲು ಮತ್ತು ಮೀನು ಹಿಡಿಯಲು ಅವಶ್ಯಕವಾದ ಎಲ್ಲಾ ಸಲಕರಣಗಳ ವಿಶೇಷ ಅನುಭವವುಳ್ಳವರು.

ಕೆಟಲಾಗು ಉಚಿತ.] [CURRENT CATALOGUE FREE.

The Bombay Armoury,
329–331, Abdul Rehman Street,
BOMBAY, 3.

26—4

Printed & published by P. I. Belliappa at "Kodagu" Press, Mercara for "Kodagu" Ltd.